ವಿಜಯಪುರ | ಸಂಪುಟ 04 | ಸಂಚಿಕೆ 139 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಗುರುವಾರ, ಜುಲೈ, 23, 2026



"ಸರ್ಕಾರವು ಅನ್ಯಾಯಕ್ಕಿಂತ ಪ್ರಶ್ನೆಗಳನ್ನೇ ಹೆಚ್ಚು ಭಯಪಡಲು ಆರಂಭಿಸಿದಾಗ ಬೆದರಿಕೆ ತಂತ್ರವನ್ನು ಅನುಸರಿಸುತ್ತದೆ. ಜನರ ಧ್ವನಿಯನ್ನು ಆಲಿಸುವ ಬದಲು ಪ್ರತಿಪಕ್ಷದ ನಾಯಕನನ್ನೇ ಬಂಧಿಸುವುದು ಪ್ರಜಾಪ್ರಭುತ್ವದ ಆತ್ಮದ ಮೇಲಿನ ನಾಚಿಕೆಗೇಡಿನ ದಾಳಿಯಾಗಿದೆ."

■ ಡಿ.ಕೆ. ಶಿವಕುಮಾರ್
ಮುಖ್ಯಮಂತ್ರಿ

ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಆದೇಶ | ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಹೇಳಿಕೆ

## ತಿಕೋಟಾದಲ್ಲಿ ನೀರಾವರಿ ಯೋಜನೆ ಹೊಸ ಕಚೇರಿಗಳ ಪ್ರಾರಂಭಕ್ಕೆ ಆದೇಶ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಆಡಳಿತಾತ್ಮಕ ಮತ್ತು ಯೋಜನೆ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ ತುಬಚಿ- ಬಬಲೇಶ್ವರ ಏತ ನೀರಾವರಿ ಯೋಜನೆಯ ಒಂದು ಹೊಸ ವಿಭಾಗ ಮತ್ತು ಮೂರು ಉಪವಿಭಾಗ ಕಚೇರಿಗಳನ್ನು ಜಿಲ್ಲೆಯ ತಿಕೋಟಾದಲ್ಲಿ ಪ್ರಾರಂಭಿಸಲು ಆದೇಶ ಹೊರಡಿಸಲಾಗಿದೆ ಎಂದು ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ.

ತಿಕೋಟಾದಲ್ಲಿ ಕಚೇರಿಗಳನ್ನು ಪ್ರಾರಂಭಿಸುವಂತೆ ಜಲಸಂಪನ್ಮೂಲ ಇಲಾಖೆಗೆ ಈ ಮುಂಚೆಯೇ ಪತ್ರ ಬರೆದಿದ್ದೆ. ಈಗ ನಮ್ಮ ಮನವಿಗೆ ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಸ್ಪಂದಿದ್ದಾರೆ. ಸಚಿವರಿಗೆ ಧನ್ಯವಾದಗಳು. ನಮ್ಮ ಬೇಡಿಕೆಯಂತೆ ತಿಕೋಟಾ ಪಟ್ಟಣದಲ್ಲಿ ಹೊಸದಾಗಿ ಒಂದು ವಿಭಾಗ ಕಚೇರಿ ಮತ್ತು ಅದರ ಅಡಿ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ತುಬಚಿ- ಬಬಲೇಶ್ವರ ಏತ ನೀರಾವರಿ ಯೋಜನೆ ಉಪವಿಭಾಗ- 1 ಮತ್ತು ಉಪವಿಭಾಗ- 2 ಹಾಗೂ ಉಪವಿಭಾಗ- 3 ತಿಕೋಟಾ ಹೊಸ ಕಚೇರಿಗಳನ್ನು ಪ್ರಾರಂಭಿಸಲು ಜಲಸಂಪನ್ಮೂಲ ಇಲಾಖೆ ಆದೇಶ ಹೊರಡಿಸಿದೆ.

ಅಲ್ಲದೇ, ಹೊಸ ಕಚೇರಿಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಕಟ್ಟಡ ಮತ್ತೀತರ ಮೂಲಭೂತ ಸೌಕರ್ಯ ನಿರ್ಮಾಣಕ್ಕಾಗಿ ಒಟ್ಟು ರೂ. 2.50 ಕೋಟಿ ಅನುದಾನ ಮತ್ತು ಕಚೇರಿಯ ಅಗತ್ಯಕ್ಕನುಗುಣವಾಗಿ ಸಿಬ್ಬಂದಿ ಒದಗಿಸಿ ಆದೇಶ ಹೊರಡಿಸಲಾಗಿದೆ ಎಂದು ಸಚಿವ ಎಂ. ಬಿ. ಪಾಟೀಲ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

## ಪರಿಸರ ರಕ್ಷಣೆ ಅನುದಿನದ ಕಾರ್ಯವಾಗಬೇಕು : ಕಾರಜೋಳ




■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಪರಿಸರ ರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ನನ್ನ ಗಿಡ ನನ್ನ ಭೂಮಿ ಸಂಘಟನೆಯ ಸಹಯೋಗದಲ್ಲಿ ವಿಜಯಪುರ ನಗರದ ಜಿಲ್ಲಾ ರೈಫಲ್ ಅಸೋಸಿಯೆಷನ್ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಯುವ ಭಾರತ ಸಂಸ್ಥಾಪಕ ಅಧ್ಯಕ್ಷ ಉಮೇಶ ಕಾರಜೋಳ ಮಾತನಾಡಿ, ಪರಿಸರ ರಕ್ಷಣೆ ಕೇವಲ ಪರಿಸರ ದಿನಾಚರಣೆಗೆ ಸೀಮಿತವಾಗಬಾರದು, ಪರಿಸರ ರಕ್ಷಣೆ ಎನ್ನುವುದು ಅನುದಿನದ ಕಾರ್ಯವಾಗಬೇಕು, ನನ್ನ ಗಿಡ ನನ್ನ ಭೂಮಿ ಸಂಘಟನೆ ನಿರಂತರವಾಗಿ ಪರಿಸರ ರಕ್ಷಣಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಪ್ರತಿಯೊಬ್ಬರಿಗೂ ಪರಿಸರ ರಕ್ಷಣೆ ಸ್ಫೂರ್ತಿ ದೊರಕಿಸುತ್ತಿದೆ ಎಂದರು.

ಸಸಿ ನೆಡುವುದು ಹಾಗೂ ಅದನ್ನು ಪೋಷಿಸುವುದು ಒಂದು ಅಪೂರ್ವ ಪರಿಸರ ರಕ್ಷಣಾ ಚಟುವಟಿಕೆ, ಶುಭ ಸಂದರ್ಭದಲ್ಲಿ ಸೇರಿದಂತೆ ವಿವಿಧ ಸಮಾರಂಭದಲ್ಲಿ ಸಸಿ ನೆಡುವ ಪರಂಪರೆ ಮೂಡಿಸಿಕೊಳ್ಳಬೇಕು ಎಂದರು.

ಬಸವರಾಜ ಬೈಚಬಾಳ, ಚಿದಾನಂದ ಔರಂಗಬಾದ, ಮಂಜುನಾಥ ಆಸಂಗಿ ಕೃಷ್ಣಾ ಗುನ್ನಾಳಕರ, ಬಸವರಾಜ ಯಾದವಾಡ ವಿನಾಯಕ ಕಾಳೆ, ವಿಜಯ ಬೋಸಲೇ, ಯಲ್ಲಪ್ಪ ಮಾಳಿ, ದ್ಯಾಮಣ್ಣ ಗೋಮಟೆ, ಕರಾಟೆ ಶಿಕ್ಷಕ ಪ್ರೇಮ ಮೊದಲಾದವರು ಪಾಲ್ಗೊಂಡಿದ್ದರು.

ರಾಜ್ಯ ಸಂಪುಟ ವಿಸ್ತರಣೆಗೂ ತಟ್ಟಿದ ದೆಹಲಿ ಪ್ರತಿಭಟನೆಯ ಬಿಸಿ | ಇನ್ನೂ ಇಬ್ಬರಿಗೆ ಡಿಸಿಎಂ ಪಟ್ಟ ಸಾಧ್ಯತೆ

## ರಾಜ್ಯ ಸಚಿವ ಸಂಪುಟ ವಿಸ್ತರಣೆ ಮತ್ತೆ ಮುಂದೂಡಿಕೆ

ನವದೆಹಲಿ: ದೆಹಲಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ನಡೆದ ಪ್ರತಿಭಟನೆ ಹಾಗೂ ಸಂಸತ್ ಅಧಿವೇಶನದ ಬಿಸಿಯಿಂದಾಗಿ ಬಹು ನಿರೀಕ್ಷಿತ ರಾಜ್ಯ ಸಚಿವ ಸಂಪುಟ ವಿಸ್ತರಣೆ ಮತ್ತೆ ಮುಂದೂಡಲ್ಪಟ್ಟಿದೆ.

ನೀಟ್ ಅಕ್ರಮಕ್ಕೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಒತ್ತಾಯಿಸಿ ಕಾಕ್ರೋಚ್ ಜನತಾ ಪಾರ್ಟಿ ಸೋಮವಾರ ನಡೆಸಿದ "ಸಂಸತ್ ಚಲೋ" ವೇಳೆ ವಿದ್ಯಾರ್ಥಿಗಳ ಮೇಲೆ ಪೊಲೀಸ್ ಬಲ ಪ್ರಯೋಗ ಖಂಡಿಸಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರ ನಿವಾಸದ ಮುಂದೆ ಧರಣಿ ನಡೆಸಿತು. ಈ ವೇಳೆ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರನ್ನು ಬಲವಂತವಾಗಿ ಪೊಲೀಸರು ವಶಕ್ಕೆ ಪಡೆದಿದ್ದರು.

ದೆಹಲಿಯಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆಯಲ್ಲಿ ಕಾಂಗ್ರೆಸ್ ಕೇಂದ್ರ ನಾಯಕತ್ವ ನಿರತವಾಗಿರುವುದರಿಂದ, ಕರ್ನಾಟಕ ಸಚಿವ ಸಂಪುಟ ವಿಸ್ತರಣೆ ಮತ್ತಷ್ಟು ವಿಳಂಬವಾಗಲಿದೆ.

ಪ್ರಧಾನಿ ನಿವಾಸದ ಮುಂದೆ ದಿಢೀರ್ ಪ್ರತಿಭಟನೆಯಿಂದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಕಾಂಗ್ರೆಸ್ ಹೈಕಮಾಂಡ್ ಜೊತೆ ಸಂಭಾವ್ಯ ಸಚಿವರ ಪಟ್ಟಿಯನ್ನು ಅಂತಿಮಗೊಳಿಸಲು ಸಾಧ್ಯವಾಗಿಲ್ಲ.



### ಇನ್ನೂ ಇಬ್ಬರಿಗೆ ಡಿಸಿಎಂ ಪಟ್ಟ?

ರಾಜ್ಯದಲ್ಲಿ ಈಗಾಗಲೇ ಡಾ.ಪರಮೇಶ್ವರ್ ಅವರು ಡಿಸಿಎಂ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೂ, ಇಬ್ಬರಿಗೆ ಡಿಸಿಎಂ ಹುದ್ದೆಯನ್ನು ನೀಡಿ, ಸಂಖ್ಯೆಯನ್ನು ಮೂರಕ್ಕೇರಿಸಲು, ಹೈಕಮಾಂಡ್ ನಿರ್ಧರಿಸಿದೆ ಎಂದು ಹೇಳಲಾಗುತ್ತಿದೆ. ಲಿಂಗಾಯತ ಸಮುದಾಯ ಮತ್ತು ಅಹಿಂದ ಸಮುದಾಯದ ನಾಯಕರಿಗೆ ಉಪಮುಖ್ಯಮಂತ್ರಿ ಹುದ್ದೆಯನ್ನು ನೀಡುವ ನಿರ್ಧಾರಕ್ಕೆ ಕಾಂಗ್ರೆಸ್ ವರಿಷ್ಠರು ಬಂದಿದ್ದಾರೆ. ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಇನ್ನೊಂದು ಸುತ್ತಿನ ಮಾತುಕತೆಯ ನಂತರ, ಅಂತಿಮ ನಿರ್ಧಾರಕ್ಕೆ ಬರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



"ರಾಜ್ಯದ ಹಿರಿಯ ನಾಯಕರಿಗೆ ಸಂಪುಟ ವಿಸ್ತರಣೆ ಸಂಬಂಧ ಶನಿವಾರ ಅಥವಾ ಭಾನುವಾರ ಮತ್ತೆ ಚರ್ಚೆಗೆ ಬರುವಂತೆ ಸೂಚಿಸಲಾಗಿದೆ. ಆಗ ಪಟ್ಟಿಯನ್ನು ಅಂತಿಮಗೊಳಿಸಬಹುದು ಮತ್ತು ಮುಂದಿನ ವಾರ ಸಂಪುಟ ವಿಸ್ತರಣೆ ಮಾಡಬಹುದು. ದೇಶದ ಹಿತಾಸಕ್ತಿಗಾಗಿ ನಡೆದ ಪ್ರತಿಭಟನೆಯಿಂದಾಗಿ ಸಂಪುಟ ವಿಸ್ತರಣೆ ಚರ್ಚೆ ನಡೆಯಲು ಸಾಧ್ಯವಾಗಲಿಲ್ಲ."

■ ಸತೀಶ್ ಜಾರಕಿಹೊಳಿ
ಲೋಕೋಪಯೋಗಿ ಸಚಿವರು

ಪ್ರತಿಭಟನೆ ಹಾಗೂ ಸಂಸತ್ತಿನ ಅಧಿವೇಶನ ಹಿನ್ನಲೆಯಲ್ಲಿ, ಸಿಎಂ ಡಿಕೆ ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರಾದ ಬಿಕೆ ಹರಿಪ್ರಸಾದ್, ಖಾಲಿ ಕೈಯಲ್ಲಿ ಬೆಂಗಳೂರಿಗೆ ವಾಪಸ್ ಹೊರಡಲಿದ್ದಾರೆ. ಬೆಂಗಳೂರಿಗೆ ತೆರಳುವ ಮೊದಲು, ಸಿದ್ದರಾಮಯ್ಯ ದೆಹಲಿಯಲ್ಲಿ ಬಸವರಾಜ ರಾಯರೆಡ್ಡಿ, ಅಶೋಕ್ ಪಟ್ಟಣ್, ರಾಜೇಂದ್ರ ರಾಜಣ್ಣ, ಬಸವರಾಜ ಶಿವಣ್ಣನವರ್ ಮತ್ತು ತೇಜಸ್ವಿನಿ ಗೌಡ ಸೇರಿದಂತೆ ಕೆಲವು ಶಾಸಕರೊಂದಿಗೆ ಉಪಾಹಾರ ಸಭೆ ನಡೆಸಿದರು.

ವಿಜಯಪುರದಲ್ಲಿ ನಡೆದ ವಿಶ್ವ ಮೆದುಳು ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೊಳಿ ಸಲಹೆ

## ಉತ್ತಮ ಜೀವನಶೈಲಿ ಮೂಲಕ ಮೆದುಳಿನ ಆರೋಗ್ಯ ಕಾಪಾಡಿಕೊಳ್ಳಿ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ನಗರದ ಜಿಲ್ಲಾಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಇದೊಂದು ಮಹತ್ವಾಕಾಂಕ್ಷಿಯ ಕಾರ್ಯಕ್ರಮ ಜಿಲ್ಲೆಯಲ್ಲಿನ ಎಲ್ಲ ನರರೋಗ ಸಂಬಂಧಿತ ಕಾಯಿಲೆಗೆ ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ವಿಭಾಗ ಸಹಕಾರಿಯಾಗಲಿದ್ದು, ಸಾರ್ವಜನಿಕರು ಸದುಪಯೋಗ ಮಾಡಿಕೊಳ್ಳಬಹುದಾಗಿದೆ ಎಂದು ಜಿಲ್ಲಾಸ್ಪತ್ರೆಯ ಶಸ್ತ್ರಚಿಕಿತ್ಸಕ ಡಾ. ಶಿವಾನಂದ ಮಾಸ್ತಿಹೊಳಿ ಹೇಳಿದರು.

ಹಿಂದಿನ ಕಾಲದ ಜನರು ತಮ್ಮ ಜೀವನಶೈಲಿ ಚೆನ್ನಾಗಿ ಕಾಪಾಡಿಕೊಳ್ಳುತ್ತಿದ್ದರು. ಸಮಯಕ್ಕೆ ಸರಿಯಾಗಿ ಊಟ, ಕೆಲಸ ಕಾರ್ಯಗಳನ್ನು ನಿಯಮಿತವಾಗಿ ನಿರ್ವಹಿಸುತ್ತಿದ್ದರು. ಆ ಕಾರಣಕ್ಕಾಗಿ ಮೆದುಳಿನ ಆರೋಗ್ಯಕ್ಕೆ ಸಂಬಂಧಿಸಿದಂತೆ ಅವರಿಗೆ ಕಾಯಿಲೆಗಳು ಬಾಧಿಸುತ್ತಿರಲಿಲ್ಲ. ಇಂದಿನ ಪೀಳಿಗೆಯು ಜೀವನಶೈಲಿ ಬದಲಾಯಿಸಿಕೊಳ್ಳುವುದರ ಮೂಲಕ ಮೆದುಳು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ಜಿಲ್ಲಾಸ್ಪತ್ರೆ ಸಹಯೋಗದಲ್ಲಿ ವಿಶ್ವ ಮೆದುಳು ದಿನಾಚರಣೆ ಅಂಗವಾಗಿ ಬುಧವಾರ ಜಿಲ್ಲಾಸ್ಪತ್ರೆಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಮಲ್ಲನಗೌಡ ಬಿರಾದಾರ ಅವರು ಮಾತನಾಡಿ, ನಮ್ಮ ಹಿರಿಯರ ಜೀವನ ಶೈಲಿ ಚೆನ್ನಾಗಿದ್ದರಿಂದ ಅವರಿಗೆ ಅಂದಾಜು 60 ರಿಂದ 65 ವರ್ಷದಲ್ಲಿ ರೋಗಗಳು ಕಾಣಿಸಿಕೊಳ್ಳುತ್ತಿದ್ದವು. ಆದರೆ ಈಗಿನ ಆಧುನಿಕ ಮತ್ತು ತಾಂತ್ರಿಕ ಜಗತ್ತಿನಲ್ಲಿ ನಮ್ಮ ಜೀವನಶೈಲಿಗಳು ತದ್ವಿರುದ್ದವಾಗಿದ್ದರಿಂದ ಈಗಿನ 20-25ರ ವಯಸ್ಸಿನ ಯುವಕರು ಮೆದುಳು ರೋಗ ಸಂಬಂಧಿಸಿದಂತೆ ಕಾಯಿಲೆಗೆ ಒಳಗಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಮೆದುಳು ರೋಗಕ್ಕೆ ಸಂಬಂಧಿಸಿದಂತೆ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಲಭ್ಯವಿದೆ. ಬಾಧಿತರು ಸದುಪಯೋಗ ಮಾಡಿಕೊಳ್ಳಬಹುದಾಗಿದೆ ಎಂದರು.

ಜಿಲ್ಲಾಸ್ಪತ್ರೆಯ ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ವಿಭಾಗದ ನರರೋಗ ತಜ್ಞ ಡಾ. ವಿರುಪಾಕ್ಷಪ್ಪ ಬಿರಾದಾರ ಮಾತನಾಡಿ, ಪ್ರತಿಯೊಬ್ಬರೂ ದಿನನಿತ್ಯ ಕನಿಷ್ಠ 7 ರಿಂದ 8 ಗಂಟೆ ನಿದ್ರೆ ಮಾಡಬೇಕು. ಉತ್ತಮ ಆಹಾರ ಪದ್ಧತಿ ಹಾಗೂ ಉತ್ತಮ ಜೀವನಶೈಲಿ ರೂಢಿಸಿಕೊಂಡರೆ ಆರೋಗ್ಯಯುತವಾಗಿ ಇರಬಹುದು ಎಂದರು.

ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ ವಿಭಾಗದ ವಿಜಯಪುರ ನೋಡಲ್ ಅಧಿಕಾರಿಗಳು ಹಾಗೂ ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿಗಳಾದ ಡಾ. ಅರ್ಚನಾ ಕುಲಕರ್ಣಿ, ಮನೋರೋಗ ತಜ್ಞ ಡಾ. ಮಂಜುನಾಥ ಮಸಳಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾಸ್ಪತ್ರೆಯ ಆರ್ ಎಂಒ ಡಾ. ಕೆ. ಡಿ. ಗುಂಡಬಾವಡಿ, ಡಾ. ಮಹೇಶ ಮೋರೆ, ಡಾ. ದೇವಮಾನೆ, ಡಾ. ಮಂಜುನಾಥ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಜಿ. ಎಮ್. ಕೋಲೂರ, ಜಿಲ್ಲಾ ಸಂಯೋಜಕ ಆನಂದ ರಾಠೋಡ ಸೇರಿದಂತೆ ಜಿಲ್ಲಾಸ್ಪತ್ರೆಯ ಸಿಬ್ಬಂದಿ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ಸಿಬ್ಬಂದಿ ಹಾಗೂ ನರ್ಸಿಂಗ್ ಕಾಲೇಜ್ ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ರವಿ ಕಿತ್ತೂರ ನಿರೂಪಿಸಿ, ವಂದಿಸಿದರು.

ವಿಜಯಪುರದಲ್ಲಿ ಬೆಳೆ ವಿಮೆ ಜಾಗೃತಿ ವಾಹನಗಳಿಗೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಡಾ. ಆನಂದ್ ಹೇಳಿಕೆ

## ಬೆಳೆ ಹಾನಿ ಸಂದರ್ಭ ರೈತರಿಗೆ ಆರ್ಥಿಕ ಭದ್ರತೆ ಒದಗಿಸಲು ಬೆಳೆ ವಿಮೆ ಅಗತ್ಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ ಜಿಲ್ಲೆಯ ರೈತರಲ್ಲಿ ಬೆಳೆ ವಿಮೆ ಯೋಜನೆ ಕುರಿತು ವ್ಯಾಪಕ ಅರಿವು ಮೂಡಿಸಿ, ಹೆಚ್ಚಿನ ಸಂಖ್ಯೆಯಲ್ಲಿ ರೈತರು ಯೋಜನೆಯ ಸೌಲಭ್ಯವನ್ನು ಪಡೆದುಕೊಳ್ಳುವ ಉದ್ದೇಶದಿಂದ ಹಮ್ಮಿಕೊಳ್ಳಲಾದ ಬೆಳೆ ವಿಮೆ ಜಾಗೃತಿ ವಾಹನಗಳಿಗೆ ಜಿಲ್ಲಾಧಿಕಾರಿಗಳಾದ ಡಾ. ಆನಂದ್ ಕೆ. ಅವರು ನಗರದ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ಜಿಲ್ಲಾದ್ಯಾಂತ ವ್ಯಾಪಕ ಜಾಗೃತಿ ಮೂಡಿಸುವ ಸಂಚಾರಿ ವಾಹನಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೃಷಿಯು ಸಂಪೂರ್ಣವಾಗಿ ಪ್ರಕೃತಿಯನ್ನು ಅವಲಂಬಿಸಿರುವ ವೃತ್ತಿಯಾಗಿದ್ದು, ಅನಿರೀಕ್ಷಿತ ಮಳೆ, ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ, ಗಾಳಿ, ಕೀಟ ಹಾಗೂ ರೋಗಬಾಧೆ ಸೇರಿದಂತೆ ವಿವಿಧ ಕಾರಣಗಳಿಂದ ಬೆಳೆ ಹಾನಿಯಾಗುವ ಸಾಧ್ಯತೆಗಳು ಹೆಚ್ಚಾಗಿವೆ. ಇಂತಹ ಸಂದರ್ಭಗಳಲ್ಲಿ ರೈತರಿಗೆ ಆರ್ಥಿಕವಾಗಿ ಆಸರೆಯಾಗುವ ಪ್ರಮುಖ ಯೋಜನೆಯೇ ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ರಾಜ್ಯ ಸರಕಾರ ಜಾರಿಗೊಳಿಸಿ ಅಧಿಸೂಚನೆ ಹೊರಡಿಸಲಾಗಿದೆ. ಪುಸಕ್ತ ಸಾಲಿನಲ್ಲಿ ಜಿಲ್ಲೆಯಲ್ಲಿ ವಿವಿಧ ಬೆಳೆಗಳಿಗೆ ರೈತರು ಬೆಳೆ ವಿಮೆ ಮಾಡಿಸಬಹುದಾಗಿದೆ ಎಂದು ಅವರು ತಿಳಿಸಿದರು.

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯನ್ನು ರೈತರ ಬೆಳೆ ನಷ್ಟವನ್ನು ಭಾಗಶಃ ಸರಿದೂಗಿಸಲು ನೆರವಾಗುತ್ತದೆ. ಆದ್ದರಿಂದ ಜಿಲ್ಲೆಯ ಪ್ರತಿಯೊಬ್ಬ ಅರ್ಹ ರೈತರೂ ಬೆಳೆ ವಿಮೆ ಮಾಡಿಸಿಕೊಳ್ಳುವ ಮೂಲಕ ತಮ್ಮ ಬೆಳೆಗಳಿಗೆ ಆರ್ಥಿಕ ಭದ್ರತೆ ಕಲ್ಪಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಯೋಜನೆಯಿಂದ ವಂಚಿತರಾಗಬಾರದು ಎಂದು ಅವರು ಹೇಳಿದರು.

ಜಿಲ್ಲೆಯ ಎಲ್ಲ ತಾಲ್ಲೂಕುಗಳು ಹಾಗೂ ಗ್ರಾಮಗಳಲ್ಲಿ ಸಂಚರಿಸಲಿರುವ ಈ ಜಾಗೃತಿ ವಾಹನಗಳು ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯ ಉದ್ದೇಶ, ನೋಂದಣಿ ವಿಧಾನ, ಅಗತ್ಯದಾಖಲೆಗಳು, ವಿಮೆ ನೋಂದಣಿಯ ಅಂತಿಮ ದಿನಾಂಕ, ಯೋಜನೆಯ ಲಾಭಗಳು ಹಾಗೂ ಬೆಳೆ ಹಾನಿಯಾದ ಸಂದರ್ಭದಲ್ಲಿ ಪರಿಹಾರ ಪಡೆಯುವ ವಿಧಾನ ಸೇರಿದಂತೆ ವಿವಿಧ ಮಾಹಿತಿಗಳನ್ನು ರೈತರಿಗೆ ತಲುಪಿಸಲಿವೆ. ರೈತರು ಈ ವಾಹನಗಳ ಮೂಲಕ ನೀಡಲಾಗುವ ಮಾಹಿತಿಯನ್ನು ತಿಳಿದುಕೊಂಡು, ನಿಗದಿತ ಅವಧಿಯೊಳಗೆ ಬೆಳೆ ವಿಮೆ ಮಾಡಿಸಿಕೊಳ್ಳಬೇಕು ಎಂದು ಹೇಳಿದರು.

ಕೃಷಿ ಜಂಟಿ ನಿರ್ದೇಶಕರಾದ ಶಿವನಗೌಡ ಪಾಟೀಲ ಮಾತನಾಡಿ, 2026-27 ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮೆ ಕುರಿತು ಕರ್ನಾಟಕ ರೈತ ಸುರಕ್ಷಾ ತಾಲ್ಲೂಕುವಾರು ಹಾಗೂ ಗ್ರಾಮ ಪಂಚಾಯಿತಿವಾರು ಅಧಿಸೂಚಿಸಲಾಗಿರುವ ವಿವಿಧ ಬೆಳೆಗಳ ವಿಮಾ ಮೊತ್ತ ವಿಮಾ ಕಂತು ಮತ್ತು ನೋಂದಣಿಯ ಅಂತಿಮ ದಿನಾಂಕದ ಮಾಹಿತಿಯನ್ನು ರೈತ ಸಂಪರ್ಕ ಕೇಂದ್ರ ಹಾಗೂ ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗಳಿಗೆ ಸಂಪರ್ಕಿಸಲು ವಿನಂತಿಸಲಾಗಿದೆ. ಈ ಯೋಜನೆಗೆ ಒಳಪಡುವ ವಿವಿಧ ಬೆಳೆಗಳಿಗೆ, ಬೆಳೆ ಸಾಲ ಪಡೆದ ರೈತರು, ಸಾಲ ನೀಡಿದ ಬ್ಯಾಂಕ್ ಗಳಲ್ಲಿ ವಿಮೆ ನೋಂದಾಯಿಸಬೇಕು ಎಂದವರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಕೃಷಿ ಉಪ ನಿರ್ದೇಶಕರು -1 ವಿಜಯಪುರ ಶರಣಗೌಡ ಪೊಲೀಸ ಪಾಟೀಲ, ಕೃಷಿ ಉಪನಿರ್ದೇಶಕರು -2 ಇಂಡಿ ಚಂದ್ರಕಾಂತ ಪವಾರ, ಕೃಷಿ ತಾಂತ್ರಿಕ ಅಧಿಕಾರಿ ರಾಜೇಂದ್ರಗೌಡ ಪಾಟೀಲ ಹಾಗೂ ವಿಮಾ ಕಂಪನಿಯ ಅಧಿಕಾರಿಗಳು ಉಪಸ್ಥಿತರಿದ್ದರು.

### ಅಧಿಸೂಚಿಸಿದ ಬೆಳೆಗಳ ವಿವರ

ಪ್ರತಿ ಎಕರೆ ಮಳೆಯಾಶ್ರಿತ ಉದ್ದು ಬೆಳೆಗೆ 15520 ರೂ. ವಿಮಾ ಮೊತ್ತ ಹಾಗೂ 310 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 15 ಕೊನೆ ದಿನ. ಪ್ರತಿ ಎಕರೆ ಮಳೆಯಾಶ್ರಿತ ಸೂರ್ಯಕಾಂತಿ ಬೆಳೆಗೆ 19280 ರೂ. ವಿಮಾ ಮೊತ್ತ ಹಾಗೂ 385 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನವಾಗಿದೆ.

ಪ್ರತಿ ಎಕರೆ ಮಳೆಯಾಶ್ರಿತ ಹೆಸರು ಬೆಳೆಗೆ 15880 ರೂ. ವಿಮಾ ಮೊತ್ತ ಹಾಗೂ 317 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 15 ಕೊನೆ ದಿನವಾಗಿದೆ. ಪ್ರತಿ ಎಕರೆ ಮಳೆಯಾಶ್ರಿತ ಸಜ್ಜೆ ಬೆಳೆಗೆ 13920 ರೂ. ವಿಮಾ ಮೊತ್ತ ಹಾಗೂ 278 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನ. ಪ್ರತಿ ಎಕರೆ ನೀರಾವರಿ ಸಜ್ಜೆಗೆ 17320 ರೂ. ವಿಮಾ ಮೊತ್ತ ಹಾಗೂ 346.4 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನ. ಪ್ರತಿ ಎಕರೆ ನೀರಾವರಿ ಸೂರ್ಯಕಾಂತಿಗೆ 23160 ರೂ. ವಿಮಾ ಮೊತ್ತ ಹಾಗೂ 463 ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನ. ಪ್ರತಿ ಎಕರೆ ನೀರಾವರಿ ನೆಲಗಡಲೆ (ಶೇಂಗಾ) ಬೆಳೆಗೆ 31120 ವಿಮಾ ಮೊತ್ತ ಹಾಗೂ 622 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನ. ಪ್ರತಿ ಎಕರೆ ನೀರಾವರಿ ಟೊಮೆಟೊ ಬೆಳೆಗೆ 67920 ರೂ. ವಿಮಾ ಮೊತ್ತ ಹಾಗೂ 3396 ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನವಾಗಿದೆ. ಪ್ರತಿ ಎಕರೆ ನೀರಾವರಿ ಮುಸುಕಿನಜೋಳಕ್ಕೆ 67920 ವಿಮಾ ಮೊತ್ತ ಹಾಗೂ 3396 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನ. ಪ್ರತಿ ಎಕರೆ ಮಳೆಯಾಶ್ರಿತ ಮುಸುಕಿನಜೋಳಕ್ಕೆ 27000 ವಿಮಾ ಮೊತ್ತ ಹಾಗೂ 540 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಆ. 14 ಕೊನೆ ದಿನವಾಗಿದೆ. ಪ್ರತಿ ಎಕರೆ ನೀರಾವರಿ ಈರುಳ್ಳಿ ಬೆಳೆಗೆ 37560 ವಿಮಾ ಮೊತ್ತ ಹಾಗೂ 1878 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನವಾಗಿದೆ.

ಪ್ರತಿ ಎಕರೆ ನೀರಾವರಿ ತೊಗರಿಗೆ 24120 ವಿಮಾ ಮೊತ್ತ ಹಾಗೂ 482 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನ.

ಪ್ರತಿ ಎಕರೆ ಮಳೆಯಾಶ್ರಿತ ತೊಗರಿಗೆ 23040 ವಿಮಾ ಮೊತ್ತ ಹಾಗೂ

460 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಆ. 14 ಕೊನೆ ದಿನವಾಗಿದೆ.

ಪ್ರತಿ ಎಕರೆ ಮಳೆಯಾಶ್ರಿತ ಹತ್ತಿಗೆ 23880 ರೂ. ವಿಮಾ ಮೊತ್ತ ಹಾಗೂ 1194 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಆ. 14 ಕೊನೆ ದಿನವಾಗಿದೆ.

ಪ್ರತಿ ಎಕರೆ ನೀರಾವರಿ ಹತ್ತಿಗೆ 34560 ರೂ. ವಿಮಾ ಮೊತ್ತ ಹಾಗೂ 1728 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನವಾಗಿದೆ.

ಪ್ರತಿ ಎಕರೆ ನೀರಾವರಿ ಮೆಣಸಿನಕಾಯಿಗೆ 49800 ವಿಮಾ ಮೊತ್ತ ಹಾಗೂ 2490 ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನ.

ಪ್ರತಿ ಎಕರೆ ಮಳೆಯಾಶ್ರಿತ ಹುರುಳಿಗೆ 9400 ವಿಮಾ ಮೊತ್ತ ಹಾಗೂ 188 ರೂ. ವಿಮಾ ಕಂತು ಪ್ರಸ್ತಾವನೆ ಸಲ್ಲಿಸಲು ಜು. 31 ಕೊನೆ ದಿನವಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

■ ಉದಯರಶ್ಮಿ ದಿನಪತ್ರಿಕೆ

# ಶತಕದ ಸಾಧಕ ಪುಲಿಗೆರೆ ಸೋಮನಾಥ



ಕನ್ನಡ ಸಾಹಿತ್ಯ ಪರಂಪರೆಯು ಸುಮಾರು ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಸುದೀರ್ಘ ಇತಿಹಾಸವನ್ನು ಹೊಂದಿರುವ ಅತ್ಯಂತ ಶ್ರೀಮಂತ ಮತ್ತು ವೈವಿಧ್ಯಮಯವಾದ ಸಂಪ್ರದಾಯವಾಗಿದೆ. ಭಾರತದ ಅತ್ಯಂತ ಹಳೆಯ ಸಾಹಿತ್ಯ ಸಂಪ್ರದಾಯಗಳಲ್ಲಿ ಇದು ಮೂರನೇ ಸ್ಥಾನದಲ್ಲಿದ್ದು, ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಚಳವಳಿಗಳೊಂದಿಗೆ ಬೆರೆತು ವಿಕಸನಗೊಂಡಿದೆ.

ಕನ್ನಡ ಭಾಷೆ ಹಲ್ಮಿಡಿ ಶಾಸನದಲ್ಲಿ ಕಂಡು ಬಂದರೂ ಸಹಿತ ಅದಕ್ಕಿಂತ ಮೂರು ಶತಮಾನಕ್ಕೂ ಅಧಿಕವಾದ ಪ್ರಾಚೀನ ಭಾರತೀಯ ದ್ರಾವಿಡ ಭಾಷೆಯಾಗಿದೆ.

ಪೂರ್ವದ ಹಳಗನ್ನಡ ಮತ್ತು ಹಳಗನ್ನಡ ಕಾಲ

(ಜೈನ ಯುಗ / ಪಂಪ ಯುಗ)

ಕ್ರಿ.ಶ. 5 ನೇ ಶತಮಾನದ ಹಲ್ಮಿಡಿ ಶಾಸನ ಕನ್ನಡದ ಅತ್ಯಂತ ಪ್ರಾಚೀನ ಲಿಖಿತ ದಾಖಲೆಯಾಗಿದೆ. ಕ್ರಿ.ಶ. 850 ರ ಸುಮಾರಿನ ಅಮೋಘವರ್ಷ ನೃಪತುಂಗನ 'ಕವಿರಾಜಮಾರ್ಗ' ನಮಗೆ ದೊರೆತಿರುವ ಮೊದಲ ಸಾಹಿತ್ಯಿಕ ಗ್ರಂಥವಾಗಿದೆ.

ಪಂಪ ಯುಗ: 10 ನೇ ಶತಮಾನವನ್ನು ಕನ್ನಡ ಸಾಹಿತ್ಯದ 'ಚಿನ್ನದ ಯುಗ' ಎನ್ನಲಾಗುತ್ತದೆ.

ರತ್ನತ್ರಯರು: ಆದಿಕವಿ ಪಂಪ (ವಿಕ್ರಮಾರ್ಜುನ ವಿಜಯ, ಆದಿಪುರಾಣ), ಪೊನ್ನ ಮತ್ತು ರನ್ನ ಕನ್ನಡದ ಮಹಾಕವಿಗಳಾಗಿದ್ದಾರೆ.

ಶೈಲಿ: ಈ ಕಾಲದಲ್ಲಿ 'ಚಂಪೂ' (ಗದ್ಯ ಮತ್ತು ಪದ್ಯ ಮಿಶ್ರಿತ) ಶೈಲಿಯು ಪ್ರಸಿದ್ಧವಾಗಿತ್ತು.

2. ನಡುಗನ್ನಡ ಕಾಲ (ವಚನ ಮತ್ತು ವೈಷ್ಣವ ಯುಗ)

12 ನೇ ಶತಮಾನದಿಂದ ಕನ್ನಡ ಸಾಹಿತ್ಯವು ರಾಜಾಶ್ರಯದಿಂದ ಹೊರಬಂದು ಸಾಮಾನ್ಯ ಜನರ ಭಾಷೆಯಾಗಿ ಮಾರ್ಪಟ್ಟಿತು.ವಚನ ಸಾಹಿತ್ಯ: 12 ನೇ ಶತಮಾನದ ಸಾಮಾಜಿಕ ಕ್ರಾಂತಿಯೊಂದಿಗೆ ವಚನ ಚಳವಳಿ ಆರಂಭವಾಯಿತು. ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ವಚನಕಾರರು ಸರಳ ಕನ್ನಡದಲ್ಲಿ ಬದುಕಿನ ತತ್ವಗಳನ್ನು ಬರೆದರು.

ಹರಿಹರ ಮತ್ತು ರಾಘವಾಂಕ: ಹರಿಹರನು 'ರಗಳೆ' ಸಾಹಿತ್ಯವನ್ನೂ, ರಾಘವಾಂಕನು 'ಷಟ್ಪದಿ' ಶೈಲಿಯನ್ನೂ ಪರಿಚಯಿಸಿದರು.

ದಾಸ ಸಾಹಿತ್ಯ: ಭಕ್ತಿ ಪಂಥ–'ದ ಭಾಗವಾಗಿ ಪುರಂದರದಾಸರು, ಕನಕದಾಸರು ಮುಂತಾದ ಹರಿದಾಸರು ಕೀರ್ತನೆಗಳ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದರು.

ಕುಮಾರವ್ಯಾಸ: 'ಕರ್ಣಾಟ ಭಾರತ ಕಥಾಮಂಜರಿ' (ಗದಗಿನ ಭಾರತ) ಮಹಾಕಾವ್ಯದ ಮೂಲಕ ನಡುಗನ್ನಡದ ಶ್ರೇಷ್ಠ ಕವಿಯಾಗಿ ಹೊರಹೊಮ್ಮಿದನು.

ಇಂತಹ ಸುದೀರ್ಘ ಸಾಹಿತ್ಯ ಪರಂಪರೆಯ ಶ್ರೇಷ್ಠ ಶತಕ ಸಾಧಕ ಪುಲಿಗೆರೆ ಸೋಮನಾಥ (ಪುಲಗೇರೆ ಸೋಮನಾಥ) ಕನ್ನಡ ಸಾಹಿತ್ಯ ಲೋಕದ ಒಬ್ಬ ಪ್ರಸಿದ್ಧ ಹಳಗನ್ನಡದ ಕವಿ.

ಇವರು ಪ್ರಮುಖವಾಗಿ ತಮ್ಮ ನೀತಿಪ್ರಧಾನ ಕಾವ್ಯವಾದ

ಸೋಮೇಶ್ವರ ಶತಕ'ಕ್ಕಾಗಿ ಜನಪ್ರಿಯರಾಗಿದ್ದಾರೆ.ಕವಿಯ ಕುರಿತಾದ ಪ್ರಮುಖ ವಿವರಗಳು

ವೈಯಕ್ತಿಕ ವಿವರಗಳು ಮತ್ತು ಕಾಲ

ಇವರು ಸುಮಾರು ಕ್ರಿ.ಶ. 1299 ಅಥವಾ 13ನೆಯ ಶತಮಾನದ ಉತ್ತರಾರ್ಧದಲ್ಲಿ ಬದುಕಿದ್ದರು ಎಂದು ಅಂದಾಜಿಸಲಾಗಿದೆ. ಇವರು ಹೊಯ್ಸಳ ರಾಜರ ಆಶ್ರಯದಲ್ಲಿದ್ದರು.

ಜನ್ಮಸ್ಥಳ: ಇವರು ಪ್ರಸ್ತುತ ಗದಗ ಜಿಲ್ಲೆಯ (ಹಳೆಯ ಧಾರವಾಡ ಜಿಲ್ಲೆ) ಲಕ್ಷ್ಮೇಶ್ವರ ತಾಲೂಕಿನ ಪುಲಿಗೆರೆ (ಈಗಿನ ಲಕ್ಷ್ಮೇಶ್ವರ) ಎಂಬ ಊರಿನವರು.ಪಾಂಡಿತ್ಯ: ಸೋಮನಾಥನು ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆಗಳಲ್ಲಿ ಮಹಾ ಪಂಡಿತನಾಗಿದ್ದನು.

ಸಾಹಿತ್ಯ ಕೃಷಿ ಮತ್ತು ಅಂಕಿತ ನಾಮ

ಇವರ ಪದ್ಯಗಳ ಅಂಕಿತ ನಾಮ "ಹರಹರಾ ಶ್ರೀ ಚೆನ್ನಸೋಮೇಶ್ವರಾ" ಅಥ–'ವಾ "ಹರಹರ ಶ್ರೀ ಚನ್ನಸೋಮೇಶ್ವರ".ಸೆ–ೂಮೇಶ್ವರ ಶತಕ: ಇದು ಇವರ ಅತ್ಯಂತ ಪ್ರಸಿದ್ಧ ಕೃತಿ.




ವೃತ್ತ ಛಂದಸ್ಸಿನಲ್ಲಿ (ಮತ್ತೇಭವಿಕ್ರೀಡಿತ ವೃತ್ತ) ರಚಿತವಾಗಿರುವ ಈ ಕಾವ್ಯವು ಒಟ್ಟು 100 ಪದ್ಯಗಳನ್ನು ಒಳಗೊಂಡಿದೆ. ಇವು ಸಮಾಜಕ್ಕೆ ಉತ್ತಮ ನೀತಿ, ಆದ–'ರ್ಶ ಮತ್ತು ಮಾನವೀಯ ಮೌಲ್ಯಗಳನ್ನು ಬೋಧಿಸುತ್ತವೆ.

ರತ್ನಾಕರಂಡಕ: ಇವರು ಚಂಪೂ ಶೈಲಿಯಲ್ಲಿ 'ರತ್ನಾಕರಂಡಕ' ಎಂಬ ಕಾವ್ಯವನ್ನೂ ರಚಿಸಿದ್ದಾರೆ.

ಪ್ರಸಿದ್ಧ ಸಾಲುಗಳು ಇವರ ಸೋಮೇಶ್ವರ ಶತಕದ ಈ ಸಾಲು ಕನ್ನಡ ನಾಡಿನಲ್ಲಿ ಅತ್ಯಂತ ಜನಪ್ರಿಯವಾಗಿದೆ:"ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ..."(ಇದರ ಅರ್ಥ: ಮನುಷ್ಯನು ಸ್ವಲ್ಪ ಜ್ಞಾನವನ್ನು ತಿಳಿದವರಿಂದ ಕಲಿತು, ಇನ್ನು ಸ್ವಲ್ಪ ಜ್ಞಾನವನ್ನು ಶಾಸ್ತ್ರಗಳನ್ನು ಕೇಳಿ ಪಡೆಯುತ್ತಾ ಜ್ಞಾನಿಯಾಗಬೇಕು.)

ಪುಲಿಗೆರೆ ಸೋಮನಾಥ ಮೂಲತಃ ಜೈನ ಧರ್ಮೀಯನಾಗಿದ್ದು ಶರಣ–ರ ವಚನಗಳನ್ನು ಆಳವಾಗಿ ಓದಿಕೊಂಡು ನಡುಗನ್ನಡ ದೇಸಿ ಪದ್ಧತಿಯನ್ನು ತನ್ನ ಕಾವ್ಯ ಶೈಲಿಯನ್ನಾಗಿ ಪರಿವರ್ತಿಸಿದನು. ಬಸವಣ್ಣ ಅಕ್ಕ ಮಹಾದೇವಿ ಮತ್ತು ಇತರ ಶರಣರ ವಚನಗಳ ಪ್ರಭಾವ ಈತನ ಮೇಲೆ ಅಪಾರವಾಗಿ ಬೀರಿತ್ತು. ಇವನ ಶತಕಗಳು ಮುಂದೆ ಸರ್ವಜ್ಞ ಮತ್ತು ತತ್ವ ಪದಕಾರರಿಗೆ ಪ್ರಭಾವ ಬೀರಿರಬಹುದು ಎಂದೆನಿಸುತ್ತಿದೆ. ಒಟ್ಟಾರೆ ಸೋಮನಾಥನ ಶತಕಗಳು ಇಂದಿಗೂ ಕನ್ನಡ ಸಾಹಿತ್ಯ ಲೋಕದ ಅಪೂರ್ವ ಆಸ್ತಿ ಎಂದು ಹೇಳ ಬಹುದು.

ಲೇಖನ
– ಡಾ. ಶಶಿಕಾಂತ ಪಟ್ಟಣ.
ರಾಮದುರ್ಗ – ಪುಣೆ






## ಪ್ಲಾಸ್ಟಿಕ್ ವಿರುದ್ಧ ನ್ಯಾಯಾಂಗದ ಜಾಗೃತಿ ಸಮರ

ಯಾದಗಿರಿ:ಪ್ಲಾಸ್ಟಿಕ್‌ಬಳಕೆಪರಿಸರ,ಜೀವಜಗತ್ತು ಮತ್ತು ಮಾನವ ಆರೋಗ್ಯಕ್ಕೆ ದೊಡ್ಡ ಬೆದರಿಕೆಯಾಗಿ ಪರಿಣಮಿಸಿರುವ ಹಿನ್ನೆಲೆಯಲ್ಲಿ, ಜಿಲ್ಲೆಯನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ಸಂಕಲ್ಪದೊಂದಿಗೆ ನ್ಯಾಯಾಂಗವೇ ಜನಜಾಗೃತಿಯ ಮುಂಚೂಣಿಗೆ ಬಂದಿದೆ. ನಗರದ ಗಂಜ್ ಆಂಜನೇಯ ದೇವಸ್ಥಾನ ಆವರಣದಿಂದ ಮಂಗಳವಾರ ಆಯೋಜಿಸಿದ್ದ ಪ್ಲಾಸ್ಟಿಕ್ ಮುಕ್ತ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಈ ಜಾಥಾ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯನ್ನು ಸಂಪೂರ್ಣ ಪ್ಲಾಸ್ಟಿಕ್ ಮುಕ್ತಗೊಳಿಸಲು ನಗರಸಭೆ, ಗ್ರಾಮ ಪಂಚಾಯಿತಿಗಳು ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ನಿರಂತರ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುವುದು ಎಂದು

ಯಾದಗಿರಿ ಜಾಗೃತಿ ಜಾಥಾಕ್ಕೆ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶ ಮರುಳಸಿದ್ದಾರಾಧ್ಯ ಎಚ್.ಜೆ. ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶ ಮರಿಯಪ್ಪ ಚಾಲನೆ ನೀಡಿದರು.


ಜಾಥಾದಲ್ಲಿ ಸ್ವತಃ ಪಾಲ್ಗೊಂಡು ಸಾರ್ವಜನಿಕ–ರಿಗೆ ಜಾಗೃತಿ ಮೂಡಿಸಿದ ನ್ಯಾಯಾಧೀಶರು, ಏಕಬಳಕೆ ಪ್ಲಾಸ್ಟಿಕ್ ತ್ಯಜಿಸುವುದು ಪ್ರತಿಯೊಬ್ಬ ನಾಗ–ರಿಕನ ಸಾಮಾಜಿಕ ಹೊಣೆಗಾರಿಕೆಯಾಗಿದೆ ಎಂದು ಕರೆ ನೀಡಿದರು. ಪರಿಸರವನ್ನು ಕಲುಷಿತಗೊಳಿಸುವ ಪ್ಲಾಸ್ಟಿಕ್ ಬಳಕೆ ಮುಂದುವರಿದರೆ ಮುಂದಿನ ಪೀಳಿಗೆಗೆ ಗಂಭೀರ ಸಂಕಷ್ಟ ಎದುರಾಗಲಿದೆ. ಆದ್ದರಿಂದ ಪರಿಸರ ಸಂರಕ್ಷಣೆಯನ್ನು ಜನಾಂದೋಲನವಾಗಿಸುವ ಅಗತ್ಯವಿದೆ ಎಂದು ಮರುಳಸಿದ್ದಾರಾಧ್ಯ ಹೇಳಿದರು.

ಹಿರಿಯ ಸಿವಿಲ್ ನ್ಯಾಯಾಧೀಶ ಮರಿಯಪ್ಪ ಮಾತನಾಡಿ, ಪ್ಲಾಸ್ಟಿಕ್‌ನಿಂದ ಮಣ್ಣು, ನೀರು ಹಾಗೂ ಜೀವರಾಶಿಗಳ ಮೇಲೆ ಉಂಟಾಗುತ್ತಿರುವ

ತಿಳಿಸಿದರು.

ಗಂಜ್ ಆಂಜನೇಯ ದೇವಸ್ಥಾನದಿಂದ ಆರಂಭವಾದ ಜಾಥಾವು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಸಾರ್ವಜನಿಕರು, ವ್ಯಾಪಾರಸ್ಥರು ಹಾಗೂ ಯುವಕರಿಗೆ ಏಕಬಳಕೆ ಪ್ಲಾಸ್ಟಿಕ್ ಬಳಕೆ ತ್ಯಜಿಸುವಂತೆ ಮನವಿ ಮಾಡಿತು. ಪರಿಸರ ಸಂರಕ್ಷಣೆಯ ಘೋಷಣೆಗಳು ಜಾಥಾದುದ್ದಕ್ಕೂ ಗಮನ ಸೆಳೆದವು.

ಕಾರ್ಯಕ್ರಮದಲ್ಲಿ ಹೋಮ್ ಗಾರ್ಡ್ ಕಮಾಂಡೆಂಟ್ ಈರಣ್ಣ ಬಡಿಗೇರ, ಸಹಾಯಕ ಪರಿಸರ ಅಧಿಕಾರಿ ಶಕುಂತಲಾ, ವಿಜಯ ವಿಠಲ್ ಸೇವಾ ಸಂಸ್ಥೆ ಅಧ್ಯಕ್ಷ ವಿಠಲ್ ಕುಲಕರ್ಣಿ, ಶಿಶಿ ಚಾ–ರಿಟೇಬಲ್ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ ಶಿರಗೋಳ, ನಗರಸಭೆಯ ಕಿರಿಯ ಆರೋಗ್ಯ ನಿರೀಕ್ಷಕಿ ಶರಣಮ್ಮ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಸ್ವಯಂಸೇವಾ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.



## ಆಹಾರ ನಿರೀಕ್ಷಕರ ವಿರುದ್ಧ ಗಂಭೀರ ಅವ್ಯವಹಾರ ಆರೋಪ; ಉನ್ನತ ಮಟ್ಟದ ತನಿಖೆಗೆ ನಮ್ಮ ಕರ್ನಾಟಕ ಸೇನೆ ಆಗ್ರಹ

ಯಾದಗಿರಿ: ಆಹಾರ ಇಲಾಖೆ ನಿರೀಕ್ಷಕ ವಿಠಲ್ ವಿರುದ್ಧ ಭ್ರಷ್ಟಾಚಾರ, ಅಧಿಕಾರ ದುರ್ಬಳಕೆ ಹಾಗೂ ಅಕ್ರಮ ಆಸ್ತಿ ಗಳಿಕೆ ಸೇರಿದಂತೆ ಹಲವು ಗಂಭೀರ ಆರೋಪಗಳನ್ನು ಹೊರಿಸಿರುವ ನಮ್ಮ ಕರ್ನಾಟಕ ಸೇನೆ ಜಿಲ್ಲಾ ಘಟಕ, ಅವರ ವಿರುದ್ಧ ಉನ್ನತ ಮಟ್ಟದ ತನಿಖೆ ನಡೆಸಿ ತಕ್ಷಣ ಅಮಾನತುಗೊಳಿಸಬೇಕೆಂದು ಆಗ್ರಹಿಸಿದೆ. ಈ ಸಂಬಂಧ ಜಿಲ್ಲಾಧಿಕಾರಿ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕರಿಗೆ ಪ್ರತ್ಯೇಕ ಮನವಿ ಸಲ್ಲಿಸಿ ಮಾತನಾಡಿದ ಜಿಲ್ಲಾ ಅಧ್ಯಕ್ಷ ವಿಶ್ವಾರಾಧ್ಯ ದಿಮ್ಮೆ, ಆಹಾರ ನಿರೀಕ್ಷಕ ವಿಠಲ್ ಅವರು ಪಡಿತರ ಕಾರ್ಡ್ ತಿದ್ದುಪಡಿ ಮತ್ತು ಹೊಸ ಕಾರ್ಡ್ ನೀಡುವ ಹೆಸ–ರಿನಲ್ಲಿ ಫಲಾನುಭವಿಗಳಿಂದ ?15 ಸಾವಿರದಿಂದ ?20 ಸಾವಿರವರೆಗೆ ಹಣ ವಸೂಲಿ ಮಾಡುತ್ತಿರುವ ಆರೋಪ ಕೇಳಿಬಂದಿದೆ ಎಂದು ಹೇಳಿದರು. ಈ ಅಕ್ರಮದಲ್ಲಿ ಇಲಾಖೆಯ ಸಿಬ್ಬಂದಿ ಲಕ್ಷ್ಮಣ ಕೂಡ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು.

ನ್ಯಾಯಬೆಲೆ ಅಂಗಡಿಗಳಿಗೆ ಪ್ರತಿ ತಿಂಗಳು ಹಂಚಿಕೆ ಆಗುವ ಅಕ್ಕಿಯಲ್ಲಿ ಎರಡು ಕ್ವಿಂಟಲ್‌ವರೆಗೆ ಕಡಿತಗೊಳಿಸಿ ವಿತರಿಸಲಾಗುತ್ತಿದೆ. ಈ ಬಗ್ಗೆ ಪ್ರಶ್ನಿಸಿದಾಗ ಮೇಲಾಧಿಕಾರಿಗಳಿಗೆ ಹಣ ನೀಡಬೇಕಾಗುತ್ತದೆ ಎಂಬ ನೆಪ ಹೇಳಲಾಗುತ್ತಿದೆ ಎಂದು ದೂರಿದರು.

ಕೆಲವು ಅನಕ್ಷರಸ್ಥ ನ್ಯಾಯಬೆಲೆ ಅಂಗಡಿ ಡೀಲರ್‌ಗಳಿಗೆ ತಿಳಿಯದಂತೆ ಹೆಚ್ಚುವರಿ ಬಿಲ್ ಸೃಷ್ಟಿಸಿ, ಆಹಾರ ಧಾನ್ಯ ವಿತರಿಸದೇ ಗೋದಾಮಿನಿಂದಲೇ ಕಾಳಸಂತೆಗೆ ಮಾರಾಟ ಮಾಡಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಗೋದಾಮು ವ್ಯವಸ್ಥಾಪಕರೂ ಭಾಗಿಯಾಗಿದ್ದಾರೆ ಎಂಬ ಗಂಭೀರ ಆರೋಪವನ್ನೂ ಅವರು ಮಾಡಿದರು.

ವಿಠಲ್ ಅವರು ಹಲವು ವರ್ಷಗಳಿಂದ ಒಂದೇ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನ್ಯಾಯಬೆಲೆ ಅಂಗಡಿ ಡೀಲರ್‌ಗಳಿಂದ ಪ್ರತಿ ತಿಂಗಳು ?5 ಸಾವಿರ ಹಣ ನೀಡುವಂತೆ ಒತ್ತಡ ಹೇರುತ್ತಿದ್ದಾರೆ. ಹಣ ನೀಡದಿದ್ದರೆ ಅಂಗಡಿ ಅಮಾನತುಗೊಳಿಸುವುದಾಗಿ ಬೆದರಿಕೆ ಹಾಕಲಾಗುತ್ತಿದೆ ಎಂದು ಹಲವಾರು ಡೀಲರ್‌ಗಳು ತಮ್ಮ ಬಳಿ ದೂರು ನೀಡಿದ್ದಾರೆ ಎಂದು ವಿಶ್ವಾರಾಧ್ಯ ದಿಮ್ಮೆ ತಿಳಿಸಿದರು.

ಇದಲ್ಲದೆ, ಡೀಲರ್‌ಗಳಿಗೆ ಹೆಚ್ಚುವರಿ ನ್ಯಾಯಬೆಲೆ ಅಂಗಡಿಗಳ ಜವಾಬ್ದಾರಿ ನೀಡುವ ಮೂಲಕ ಅದರ ಆದಾಯದಲ್ಲಿ ಪಾಲು ಪಡೆಯಲಾಗುತ್ತಿದೆ. ಸಂಬಂಧಿಕರ ಹೆಸರಿನಲ್ಲಿ ಆದಾಯಕ್ಕೂ ಮೀರಿ ಅಕ್ರಮ ಆಸ್ತಿ ಸಂಪಾದಿಸಿರುವ ಅನುಮಾನವೂ ಇದೆ ಎಂದು ಆರೋಪಿಸಿದರು.

ಮದ್ಯಪಾನದ ಅಮಲಿನಲ್ಲಿ ರಾತ್ರಿ ವೇಳೆ ಡೀಲರ್‌ಗಳಿಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಕರೆ ಸ್ವೀಕರಿಸದಿದ್ದರೆ ಅಮಾನತು ಮಾಡುವುದಾಗಿ ಬೆದರಿಕೆ ಹಾಕುವುದು ಸೇರಿದಂತೆ ಹಲವು ರೀತಿಯ ಅಧಿಕಾರ ದುರ್ಬಳಕೆ ನಡೆಯುತ್ತಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

## ವಕ್ಫ್ ಆಸ್ತಿ ರಕ್ಷಣೆಗೆ ಹೋರಾಡಿದ್ದರಿಂದ ಜೀವನ ಸಂಕಷ್ಟಕ್ಕೆ ಸಿಲುಕಿತು: ಅಬ್ದುಲ್ ಸಮಿ ಆರೋಪ



ಬೀದರ್:ಕಳೆದ 15 ವರ್ಷಗಳಿಂದ ವಕ್ಫ್ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸುತ್ತಿರುವ ನಾನು(ಅಬ್ದುಲ್ ಸಮಿ ಅಲಿಯಾಸ್ ಸಮಿ ಶೇಖ್) ಅವರು), ವಕ್ಫ್ ಆಸ್ತಿಗಳ ರಕ್ಷಣೆಗಾಗಿ ನಡೆಸಿದ ಹೋರಾಟದ ಪರಿಣಾಮವಾಗಿ ನನ್ನ ವಿರುದ್ಧ ಸಂಚು ರೂಪಿಸಿ ಕಿರುಕುಳ ನೀಡಲಾಗಿದೆ ಎಂದು ವಕ್ಫ್ ಆಸ್ತಿಗಾಗಿ ಹೋರಾಟ ನಡೆಸಿದ ಅಬ್ದುಲ್ ಸಮಿ ಆರೋಪಿಸಿದ್ದಾರೆ.

ಸೋಮವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ವಕ್ಫ್ ಅಧಿಕಾರಿಗಳಿಂದ ಹಿಡಿದು ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅವರೆಗೆ ಅನೇಕ ಬಾರಿ ವಕ್ಫ್ ಆಸ್ತಿಗಳ ರಕ್ಷಣೆಗಾಗಿ ಮನವಿ ಸಲ್ಲಿಸಿದ್ದು, ಹಲವು ಪ್ರಕರಣಗಳಲ್ಲಿ ವಕ್ಫ್ ಟ್ರಿಬ್ಯುನಲ್‌ನಲ್ಲೂ ಹೋರಾಟ ನಡೆಸಿದ್ದೇನೆ ಎಂದು ಹೇಳಿದರು. ವಕ್ಫ್ ನೀತಿ ಸುಧಾರಣೆಗಾಗಿ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೂ ಮನವಿ ಸಲ್ಲಿಸಿದ್ದೇನೆ ಎಂದು ತಿಳಿಸಿದರು.

ತಮ್ಮ ಕಾರ್ಯವನ್ನು ಗುರುತಿಸಿ ಜಮಾಅತ್–ಎ–ಇಸ್ಲಾಮಿ ಹಿಂದ್ ಸಂಸ್ಥೆಯ ಅಂಗ ಸಂಸ್ಥೆಯಾದ ಕರ್ನಾಟಕ ಔಕಾಫ್ ರಕ್ಷಣಾ ಸಮಿತಿಯ ಬೀದರ್ ಜಿಲ್ಲಾ ಅಧ್ಯಕ್ಷರನ್ನಾಗಿ ನನ್ನನ್ನು ನೇಮಕ ಮಾಡಲಾಗಿತ್ತು. ಆದ–'ರೆ, ಜಮಾಅತ್‌ನ ಕೆಲವರ ಬಳಿ ವಕ್ಫ್ ಆಸ್ತಿ ಇರುವ ವಿಚಾರ ಪ್ರಸ್ತಾಪಿಸಿದ ಬಳಿಕ ತಮ್ಮನ್ನು ಕಡೆಗಣಿಸಲು ಆರಂಭಿಸಿದರು ಎಂದು ಸಮಿ ಆರೋಪಿಸಿದರು.

ಹಳದಕೇರಿ (ಕೆ) ಗ್ರಾಮದ ಸರ್ವೆ ನಂ. 85ರ ದರ್ಗಾ ಹಜ್ರತ್ ಕುತ್ಬೆ ಸಾನಿ (ಖಂ) ಅವರಿಗೆ ಸೇರಿದ ಗಜೆಟ್ ನೋಟಿಫೈಡ್ ವಕ್ಫ್ ಆಸ್ತಿ ಕುರಿತು 2022ರಲ್ಲಿ ಸ್ಥಳೀಯ ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ್ದೆ. ಆ ಬಳಿಕ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಮನ್ನಾನ್ ತಮ್ಮ ವಿರುದ್ಧ ವಿರೋಧದ ಧೋರಣೆ ತಾಳಿದರು ಎಂದು ಹೇಳಿದರು.

2024ರಲ್ಲಿ ಮಿರ್ಜಾಪುರ (ಟಿ) ಗ್ರಾಮದ ಸರ್ವೆ ನಂ. 6, ಹಿಸ್ಸಾ ನಂ. 7ರ 3 ಎಕರೆ 10 ಗುಂಟೆ ಜಮೀನನ್ನು ಖರೀದಿಸುವ ಮುನ್ನ ಸಂಬಂಧಪಟ್ಟವರೊಂದಿಗೆ ಮಾತನಾಡಿ, ದಾಖಲೆಗಳನ್ನು ಸಂಪೂರ್ಣ ಪರಿಶೀಲಿಸಿ ಕಾನೂನು ಬದ್ಧವಾಗಿ ನೋಂದಣಿ ಮಾಡಿಕೊಂಡಿದ್ದೇನೆ. ಮ್ಯೂಟೇಶನ್ ಸಹ ನನ್ನ ಹೆಸರಿಗೆ ಆಗಿತ್ತು. ಬಳಿಕ ಅಭಿವೃದ್ಧಿ ಕಾಮಗಾರಿ ಆರಂಭಿಸಿದಾಗ ಪ್ರಭಾವ ಬಳಸಿ ಕಾಮಗಾರಿಗೆ ಅಡ್ಡಿ ಪಡಿಸಲಾಯಿತು ಎಂದು ಆರೋಪಿಸಿದರು.

ಈ ವೇಳೆ, "ನಿನಗೆ ವಕ್ಫ್ ಆಸ್ತಿ ಉಳಿಸುವುದು ತುಂಬಾ ಇಷ್ಟ ಅಲ್ಲವೇ? ಈಗ ನಿನ್ನದೇ ಆಸ್ತಿಯನ್ನು ಉಳಿಸಿಕೊಂಡು ತೋರಿಸು" ಎಂದು ಬೆದರಿಕೆ ಸಹ ಹಾಕಲಾಯಿತು ಎಂದು ಅವರು ಆರೋಪಿಸಿದರು.

ಈ ಸಂಬಂಧ ಎರಡು ಬಾರಿ ಪೊಲೀಸರು ಹಾಗೂ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಬಂದಿದ್ದರು. ರಾಜಕೀಯ ಪ್ರಭಾವದಿಂದ ಅವರು ನ್ಯಾಯಾಲಯದಲ್ಲಿ ನನ್ನ ವಿರೂದ್ಧವೆ ಅತಿಕ್ರಮಣ ಪ್ರಕರಣ ದಾಖಲಿಸಿದ್ದರು, ನಂತರ ತಮ್ಮ ಹೆಸರನ್ನು ಖಖಿಅಯಿಂದ ತೆಗೆದುಹಾಕಿದ ಹಿನ್ನೆಲೆಯಲ್ಲಿ ಪ್ರಕರಣ ಹಿಂತೆಗೆದುಕೊಳ್ಳಬೇಕಾಯಿತು ಎಂದು ಸಮಿ ತಿಳಿಸಿದರು.

ತಮ್ಮ ಆರೋಪದ ಪ್ರಕಾರ, 2025ರ ಮೇ 4ರಂದು ಯಾವುದೇ ಮುಂಚಿತ ನೋಟಿಸ್ ನೀಡದೆ ಹಾಗೂ ತಮ್ಮ ಪರವಾಗಿದ್ದ ಮ್ಯೂಟೇಶನ್ ಆದೇಶ ರದ್ದುಗೊಳಿಸದೇ ಹೊಸ ಎಂಆರ್ ಆದೇಶ ಹೊರಡಿಸಿ ಖಖಿಅಯಿಂದ ತಮ್ಮ ಹೆಸರನ್ನು ತೆಗೆದು ಸಣ್ಣ ನೀರಾವರಿ ಇಲಾಖೆಯ ಹೆಸರನ್ನು ದಾಖಲಿಸಲಾಗಿದೆ. ಈ ಕ್ರಮವನ್ನು ಪ್ರಶ್ನಿಸಿ ಕರ್ನಾಟಕ ಹೈಕೋರ್ಟ್‌ನ ಕಲಬುರಗಿ ಪೀಠದಲ್ಲಿ ಅರ್ಜಿ ಸಲ್ಲಿಸಿದ್ದು, ಪ್ರಕರಣ ನ್ಯಾಯಾಲಯದ ವಿಚಾರಣೆಯಲ್ಲಿದೆ ಎಂದು ಹೇಳಿದರು.

ಜಮೀನಿನ ಅಭಿವೃದ್ಧಿಗಾಗಿ ಹೂಡಿಕೆ ಪಡೆದಿದ್ದ ಹಣವನ್ನು ವಾಪಸ್ ಕೇಳುವಂತೆ ಕೆಲವರಿಗೆ ಪ್ರಚೋದನೆ ನೀಡಲಾಗಿದೆ ಎಂಬ ಆರೋಪವನ್ನೂ ಅವರು ಮಾಡಿದರು. ಇದರಿಂದ ಆರ್ಥಿಕ ಸಂಕಷ್ಟ ಹಾಗೂ ಮಾನಸಿಕ ಒತ್ತಡ ಎದುರಿಸಬೇಕಾಯಿತು ಎಂದು ಸಮಿ ತಿಳಿಸಿದರು.

ನ್ಯಾಯ ಮತ್ತು ರಕ್ಷಣೆಯ ನಿರೀಕ್ಷೆಯಲ್ಲಿ ರಾಬಿತಾ–ಎ–ಮಿಲ್ಲತ್ ಸಂಸ್ಥೆಯನ್ನು ಸಂಪರ್ಕಿಸಿದ್ದೆ. ಆದರೆ, 2025ರ ಡಿಸೆಂಬರ್ ಕೊನೆಯ ವಾರದಲ್ಲಿ ಸಭೆಯ ಹೆಸರಿನಲ್ಲಿ ಶಹಾಪುರ್ ಗೇಟ್ ಬಳಿ ಇರುವ ಶಾಹೀನ್ ಸ್ಕೂಲ್‌ಗೆ ಕರೆಯಿಸಿ, ಅಲ್ಲಿ ಸುಮಾರು 25 ರಿಂದ 30 ಜನರ ಸಮ್ಮುಖದಲ್ಲಿ ತಮ್ಮ ಮೇಲೆ ಒತ್ತಡ ಹೇರಿ ವಿಡಿಯೋ ಚಿತ್ರೀಕರಿಸಲಾಯಿತು ಎಂದು ಆರೋಪಿಸಿದರು.

ವಕ್ಫ್ ಆಸ್ತಿಯನ್ನು ಉಳಿಸಲು ಪ್ರಯತ್ನಿಸುವುದು ಅಪರಾಧವೇ? ವಕ್ಫ್ ತಿದ್ದುಪಡಿ ಮಸೂದೆ ವಿರುದ್ಧ ಪ್ರತಿಭಟನೆ ನಡೆಸುವವರು ತಮ್ಮ ಕುಟುಂಬದ ಮೇಲೆ ವಕ್ಫ್ ಆಸ್ತಿ ಕುರಿತು ಪ್ರಶ್ನೆಗಳು ಎದ್ದಾಗ ಉತ್ತರಿಸಬೇಕಲ್ಲವೇ? ನನ್ನ ಪರಿಸ್ಥಿತಿಯ ಬಗ್ಗೆ ಬೀದರ್‌ನ ಮುಸ್ಲಿಂ ನಾಯಕರು, ಉಲಮಾಗಳು ಹಾಗೂ ಸಂಘಟನೆಗಳು ಮೌನವಾಗಿರುವುದು ಏಕೆ? ಎಂದು ಪ್ರಶ್ನಿಸಿದರು.

ಮಾಜಿ ಸಚಿವ ಜಮೀರ್ ಅಹ್ಮದ್ ಖಾನ್, ಶಾಸಕ ರಹೀಮ್ ಖಾನ್ ಹಾಗೂ ಉದ್ಯಮಿ ಅಯಾಝ್ ಖಾನ್ ಅವರು ಈ ವಿಷಯದಲ್ಲಿ ಮಧ್ಯ ಪ್ರವೇಶಿಸಿ ನ್ಯಾಯ ದೊರಕಿಸಿ ಕೊಡಲು ಮುಂದಾಗಬೇಕು ಎಂದು ಅಬ್ದುಲ್ ಸಮಿ ಮನವಿ ಮಾಡಿದ್ದಾರೆ.

## ಗ್ರಾಹಕರು ಬ್ಯಾಂಕನ ಸೌಲಭ್ಯಗಳನ್ನು ಪಡೆದುಕೊಳ್ಳಿ



ಸೈದಾಪುರ:ಗ್ರಾಹಕರ ಅನುಕೂಲಕ್ಕಾಗಿ ನಾನಾ ಯೋಜನೆಗಳ ಸೌಲಭ್ಯಗಳನ್ನು ನೀಡುತ್ತಿದ್ದು ಅವುಗಳ ಸದುಪಯೋಗ ಪಡೆದುಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಬ್ಯಾಂಕ್ ವ್ಯವಸ್ಥಾಪಕ ಭಾಸ್ಕರ್ ಅವರು ಸಲಹೆ ನೀಡಿದರು.

ಸಮೀಪದ ಬಳಿಚಕ್ರ ಗ್ರಾಮದ ಬ್ಯಾಂಕ್‌ಆಫ್ ಬರೋಡಾ ಶಾಖೆಯಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬ್ಯಾಂಕ್ ನ 119ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದರು. ಗ್ರಾಹಕ ಸ್ನೇಹಿಯಾದ ನಮ್ಮ ಬ್ಯಾಂಕ್‌ಆಫ್ ಬರೋಡಾವನ್ನು 1908 ಜುಲೈ ತಿಂಗಳಲ್ಲಿ ಶಾಯಜಿರಾವ್ ಗಾಯ್ಕವಾಅವರು ವಡೋದರದಲ್ಲಿ ಸ್ಥಾಪನೆ ಮಾಡುತ್ತಾರೆ. ಆರಂಭಿಕ ದಿನದಿಂದ ಇಂದಿನವರೆಗೆ ಗ್ರಾಹಕರಿಗೆ ಪೂರಕವಾಗಿ ಬ್ಯಾಂಕ್ ನಿಯಮಗಳನ್ನು ರೂಪಿಸಿದ್ದು ಕಾರ್ಯರೂಪಕ್ಕೆತರಲಾಗುತ್ತಿದೆ ಎಂದು ಹೇಳಿದರು.

ನಮ್ಮ ಬಳಿಚಕ್ರ ಬ್ಯಾಂಕ್ ಗ್ರಾಮೀಣ ಪ್ರದೇಶದಲ್ಲಿದ್ದು ಇಲ್ಲಿಗೆ ಬರುವ ಬಹುತೇಕ ಗ್ರಾಹಕರು ಕೃಷಿಕರೇ ಆಗಿದ್ದಾರೆ. ಅವರಲ್ಲಿ ಎಲ್ಲರೂ ಬೆಳೆ ಸಾಲ ಪಡೆಯುತ್ತಿದ್ದಾರೆ. ಇದಲ್ಲದೆ ವಾಹನ, ಮನೆ ಇತ್ಯಾದಿಗಳಿಗೆ ಸಾಲ ಸೌಲಭ್ಯ ನೀಡಲಾಗುತ್ತದೆ. ಹಣ ಪಡೆದು ನಿಯಮಿತವಾಗಿ ಮರುಪಾವತಿ ಮಾಡುವ ಗ್ರಾಹಕರಿಗೆ ಸಾಲ ಯೋಜನೆ ತುಂಬಾ ಸಹಕಾರಿಯಾಗಿದೆ. ಇದಲ್ಲದೆ ಬ್ಯಾಂಕ್ ನಲ್ಲಿ ಹಣ ಠೇವಣಿ ಇಡುವವರಿಗೆ ಆಕರ್ಷಕ ಬಡ್ಡಿ ನೀಡಲಾಗುತ್ತದೆ ಎಂದು ತಿಳಿಸಿದರು. ಸಂಸ್ಥಾಪನಾ ದಿನದ ನಿಮಿತ್ತ ಬರೋಡಾ ಬ್ಯಾಂಕ್ ಬಳಿಚಕ್ರ ಶಾಖೆಗೆ ಬಲೂನ್ ಮತ್ತಿತರ ಅಲಂಕಾರಿಕ ವಸ್ತುಗಳಿಂದ ಸಿಂಗರಿಸಲಾಗಿತ್ತು. ಇದಲ್ಲದೆ ಸಂಸ್ಥಾಪಕರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ವಿಶೇಷ ಪೂಜೆ ಸಲ್ಲಿಸಿದ ಬ್ಯಾಂಕ್ ಸಿಬ್ಬಂದಿ ಕೇಕ್ ಕತ್ತರಿಸಿ, ಸಿಹಿ ತಿಂದು ಸಂಭ್ರಮಿಸಿದರು.

ಈ ವೇಳೆ ಬ್ಯಾಂಕ್ ನ ನಿವೃತ್ತ ಅಧಿಕಾರಿ ಮಹದೇವಪ್ಪ ಕಣೇಕಲ್, ಬ್ಯಾಂಕ್‌ನ ಸಹಾಯಕ ವ್ಯವಸ್ಥಾಪಕ ನರೇಂದ್ರ, ಕ್ಯಾಶಿಯರ್ ಮಯೂರ್, ಉಮೇಶ, ರಸೂಲ್ ಬಿ, ಡಿಎಸ್ ಎ ಸಾಹೇಬಹುಸೇನ್ ನೀಲಹಳ್ಳಿ, ಮಶೆಪ್ಪ, ಭೀಮಪ್ಪ ಕಾಳೆಬೆಳಗುಂದಿ, ಭೀಮೇಶ್, ಗುರುರಾಜ ಬಳಿಚಕ್ರ, ಖಂಡಪ್ಪ, ರಾಜಶೇಖರಗೌಡ ಕಾಳೆಬೆಳಗುಂದಿ, ಅನಿಲ್ ವಂಕಸಂಬರ ಸೇರಿದಂತೆ ಗ್ರಾಹಕರು ಉಪಸ್ಥಿತರಿದ್ದರು.

## ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರ ಸಬಲೀಕರಣಕ್ಕೆ ಆಶಾಕಿರಣದ ವಿನೂತನ ಯೋಜನೆ



ಯಾದಗಿರಿ: ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರು ಭಿಕ್ಷಾಟನೆ ಹಾಗೂ ಲೈಂಗಿಕ ವೃತ್ತಿಯಿಂದ ಹೊರಬಂದು ಸ್ವಾವಲಂಬಿ ಜೀವನ ನಡೆಸುವ ಉದ್ದೇಶದಿಂದ ಯಾದಗಿ–ರಿಯ ಆಶಾಕಿರಣ ಸಾಮಾಜಿಕ ಸೇವಾ ಸಂಸ್ಥೆ ಹಾಗೂ ಎಸ್‌ಎಫ್ ಸಂಯುಕ್ತವಾಗಿ ವಿನೂತನ ಜೀವನೋಪಾಯ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ.

ಕಳೆದ ಆರು ತಿಂಗಳಿಂದ ಸುಮಾರು 40 ಮಂದಿ ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರಿಗೆ ವಿವಿಧ ಕೌಶಲ್ಯಾಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿಗಳನ್ನು ನೀಡಲಾಗುತ್ತಿದೆ. ಜೊತೆಗೆ ಗ್ರಾಮೀಣ ಭಾಗದ ಮಹಿಳೆಯರಿಗೆ ಕುರಿ ಸಾಕಣೆ, ಕೋಳಿ ಸಾಕಣೆ, ಹೈನುಗಾರಿಕೆ ಸೇರಿದಂತೆ ವಿವಿಧ ಆದಾಯೋತ್ಪಾದಕ ಚಟುವಟಿಕೆಗಳನ್ನು ಆರಂಭಿಸಲು ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ದೊರಕುವಂತೆ ಸಂಸ್ಥೆ ನೆರವು ನೀಡುತ್ತಿದೆ.

ಈ ಯೋಜನೆಯ ಭಾಗವಾಗಿ 'ಬೆಣ್ಣೆ ಅಂಗಳ' ವತಿಯಿಂದ ತಯಾರಿಸಲಾದ ಬನ್ ಮಾಸ್ಕಾ ಉತ್ಪನ್ನಕ್ಕೆ ಸಾರ್ವಜನಿಕರ ಪ್ರತಿಕ್ರಿಯೆ ಅರಿಯುವ ಉದ್ದೇಶದಿಂದ ನಗರದ ಹೊಸ ಬಸ್ ನಿಲ್ದಾಣದ ಪಾದಚಾರಿ ಮಾರ್ಗದಲ್ಲಿ ಮಾರಾಟ ಕಾರ್ಯಕ್ರಮ ಆಯೋಜಿಸಲಾಯಿತು. ಸಾರ್ವಜನಿಕರು ಉತ್ಪನ್ನವನ್ನು ಖರೀದಿಸಿ ಪ್ರೋತ್ಸಾಹ ನೀಡಿದ ಹಿನ್ನೆಲೆಯಲ್ಲಿ ಭಾಗವಹಿಸಿದ ಮಹಿಳೆಯರಲ್ಲಿ ಆತ್ಮವಿಶ್ವಾಸ ಹೆಚ್ಚಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಾಯಾ ಎಸ್.ಆರ್. ನಾಯಕ, ಲಿಂಗತ್ವ ಅಲ್ಪಸಂಖ್ಯಾತ ಮಹಿಳೆಯರು ಸಮಾಜದಲ್ಲಿ ಘನತೆ ಮತ್ತು ಗೌರವದಿಂದ ಬದುಕು ಕಟ್ಟಿಕೊಳ್ಳಲು ಸ್ವಯಂ ಉದ್ಯೋಗವೇ ಶಾಶ್ವತ ಪರಿಹಾರವಾಗಿದೆ. ಇದೇ ಉದ್ದೇಶದಿಂದ ಸಂಸ್ಥೆ ತರಬೇತಿ, ಮಾರ್ಗದರ್ಶನ ಹಾಗೂ ಆರ್ಥಿಕ ಸಬಲೀಕರಣ ಕಾರ್ಯಕ್ರಮಗಳನ್ನು ನಿರಂತರವಾಗಿ ಅನುಷ್ಠಾನಗೊಳಿಸುತ್ತಿದ್ದು, ಇನ್ನಷ್ಟು ಮಹಿಳೆಯರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.



# ಯುಕೆಪಿ ಎಂ.ಡಿ. ಕಚೇರಿಯ ಕಂಪ್ಯೂಟರ್ ಜಪ್ತಿ!

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: ಕಾಲುವೆ ಮತ್ತೀತರ ಉದ್ದೇಶಕ್ಕಾಗಿ ರೈತರಿಂದ ವಶಪಡಿಸಿಕೊಂಡ ಭೂಮಿಗೆ ನ್ಯಾಯಾಲಯ ನಿಗದಿಪಡಿಸಿದ ಹೆಚ್ಚುವರಿ ಪರಿಹಾರ ನೀಡದ ಕಾರಣ ಮಂಗಳವಾರ ಕೃಷ್ಣಾ ಭಾಗ್ಯ ಜಲ ನಿಗಮದ ಇಲ್ಲಿಯ ವ್ಯವಸ್ಥಾಪಕ ನಿರ್ದೇಶಕರ ಕಚೇರಿಯನ್ನು ಜಪ್ತಿ ಮಾಡಲಾಯಿತು.

ರೈತರಾದ ನಾನಾಗೌಡ ಪಾಟೀಲ ಅವರ 41,96,074 ರೂ, ದೇವೇಂದ್ರ ಬಸಣ್ಣ ತಳವಾರ ಅವರ 32,07,990 ರೂ, ಭೀಮನಗೌಡ ಬಸನಗೌಡ ಟಕ್ಕಳಕಿ ಅವರಿಗೆ ,65,39,367 ರೂ ಪರಿಹಾರವನ್ನು ಇಂಡಿ ನಗರದ ಯುಕೆಪಿಯ ವಿಶೇಷ ಭೂಸ್ವಾಧೀನಾಧಿಕಾರಿಗಳು ನೀಡಬೇಕಿತ್ತು. ಪರಿಹಾರ ನೀಡಲು ವಿಫಲರಾದ ಕಾರಣ ವಿಜಯಪುರದ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶದಂತೆ ಮಂಗಳವಾರ ಒಂದು ಕಂಪ್ಯೂಟರ್ ನ್ನು ಜಪ್ತಿ ಮಾಡಲಾಯಿತು.

ವಕೀಲರಾದ ಡಿ.ಜಿ. ಬಿರಾದಾರ, ಕೆ.ಎಚ್. ನಿಡೋಣಿ, ಕೆ.ಪಿ. ಬೂದಿಹಾಳ, ಐ.ಜಿ. ವಾದಿಶೆಟ್ಟಿ ರೈತರ ಪರ ವಾದ ಮಂಡಿಸಿದ್ದರು.

# ಡಾ.ಸುರೇಖಾ ರಾಠೋಡ ಗೆ "ಸಾಹಿತ್ಯ ರತ್ನ" ಪ್ರಶಸ್ತಿ ಪ್ರದಾನ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ವಿಜಯಪುರ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು, ಸಿಂದಗಿ ಇವರ ಸಹಯೋಗದಲ್ಲಿ ಮಂಗಳವಾರ ಸಿಂದಗಿಯಲ್ಲಿ ನಡೆದ "ವಿಜಯಪುರ ಜಿಲ್ಲಾ 21ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ"ದಲ್ಲಿ

ಡಾ. ಸುರೇಖಾ ರಾಠೋಡ ಅವರಿಗೆ "ಸಾಹಿತ್ಯ ರತ್ನ" ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗಿದೆ.

ಸಾಹಿತ್ಯ ಕ್ಷೇತ್ರಕ್ಕೆ ಡಾ. ಸುರೇಖಾ ರಾಠೋಡ ಅವರು ನೀಡಿದ ಕೊಡುಗೆಯನ್ನು ಗುರುತಿಸಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವಿಜಯಪುರ ವತಿಯಿಂದ ಅವರಿಗೆ ಈ ಪ್ರಶಸ್ತಿ ಲಭಿಸಿದೆ.

ಪ್ರಶಸ್ತಿಗೆ ಭಾಜನರಾದ ಡಾ. ಸುರೇಖಾ ರಾಠೋಡ ಅವರಿಗೆ 'ಉದಯರಶ್ಮಿ' ಬಳಗ ಅಭಿನಂದನೆಗಳನ್ನು ಸಲ್ಲಿಸಿದೆ.

# ಬಿ.ವಿ.ಹಿರೇಮಠ ಗೆ 'ಸಿಂದಗಿ ಸಿರಿ' ಆದರ್ಶ ಶಿಕ್ಷಕ ಪ್ರಶಸ್ತಿ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಆದರ್ಶ ಸೇವೆ, ಕರ್ತವ್ಯನಿಷ್ಠೆ, ಶಿಸ್ತು, ಬದ್ಧತೆ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ನೀಡಿರುವ ಅಮೂಲ್ಯ ಕೊಡುಗೆಯನ್ನು ಗೌರವಿಸಿ, ಸಿಂದಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹೂವಿನಹಳ್ಳಿಯ ಶಿಕ್ಷಕ ಬಿ.ವಿ. ಹಿರೇಮಠ ಅವರಿಗೆ 'ಸಿಂದಗಿ ಸಿರಿ ಆದರ್ಶ ಶಿಕ್ಷಕ ಪ್ರಶಸ್ತಿ–2025–26' ನೀಡಿ ಗೌರವಿಸಲಾಗಿದೆ.

ಕನ್ನಡ ಸಾಹಿತ್ಯ ಗೆಳೆಯರ ಬಳಗ, ಸಿಂದಗಿ ವತಿಯಿಂದ ಶ್ರೀ ರಾಜಶೇಖರ ಕೂಚಬಾಳ ಇವರ 57ನೇ ಹುಟ್ಟುಹಬ್ಬದ ಸಂಭ್ರಮ ಹಾಗೂ ಜನ್ಮದಿನದ ಅಂಗವಾಗಿ ಈ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಶಿಕ್ಷಣ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡಿರುವ ಶ್ರೀ ಬಿ.ವಿ. ಹಿರೇಮಠ ಅವರ ಸೇವಾ ಯಾತ್ರೆಯು ಹೀಗೆಯೇ ನಿರಂತರವಾಗಿ ಸಾಗಲಿ ಎಂದು ಕನ್ನಡ ಸಾಹಿತ್ಯ ಗೆಳೆಯರ ಬಳಗದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಹಾರೈಸಿ, ಶುಭ ಹಾರೈಸಿದ್ದಾರೆ.

# ರಾಜ್ಯಮಟ್ಟದ ಜೀವನಾಡಿ ಕನ್ನಡ ಸಾಹಿತ್ಯ ಸ್ಪರ್ಧೆ–2026

ಮಂಡ್ಯ: ಜೀವನಾಡಿ ಕನ್ನಡ ಪತ್ರಿಕೆಯ ಐದನೇ ವಾರ್ಷಿಕೋತ್ಸವ ಅಂಗವಾಗಿ ದಿನಾಂಕ: 13–09–2026ರ ಭಾನುವಾರದಂದು ಬೆಳಗ್ಗೆ 10ಗಂಟೆಗೆ ಮಂಡ್ಯದ ಸ್ಟೇಡಿಯಂ ಪಕ್ಕದಲ್ಲಿರುವ ಗಾಂಧಿ ಭವನದಲ್ಲಿ ಜೀವನಾಡಿ ಕನ್ನಡ ಸಾಹಿತ್ಯ ಸ್ಪರ್ಧೆ–2026ರ ಕಾರ್ಯಕ್ರಮದಲ್ಲಿ ಸಣ್ಣಕಥೆ, ಪ್ರಬಂಧ, ಕವಿತೆ, ಪ್ರಕಾರಗಳಿಗೆ ನಗದು ಬಹುಮಾನ ನೀಡಿ ಪುರಸ್ಕರಿಸಲಾಗುವುದು, ಆಸಕ್ತರು ಈ ಕೆಳಕಂಡ ವಿಭಾಗಗಳಿಗೆ ಲೇಖನಗಳನ್ನು ಕಳಿಸಬಹುದೆಂದು ಜೀವನಾಡಿ ಪತ್ರಿಕೆ ಸಂಪಾದಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

1. ರಾಜ್ಯಮಟ್ಟದ ಜೀವನಾಡಿ ಕನ್ನಡ ಸಣ್ಣ ಕಥಾ ಸ್ಪರ್ಧೆ– ರೂ.15,000/– ನಗದು ಬಹುಮಾನ
2. ರಾಜ್ಯಮಟ್ಟದ ಜೀವನಾಡಿ ಕನ್ನಡ ಪ್ರಬಂಧ ಸ್ಪರ್ಧೆ– ರೂ.10,000/– ನಗದು ಬಹುಮಾನ
3. ರಾಜ್ಯಮಟ್ಟದ ಜೀವನಾಡಿ ಕನ್ನಡ ಕವನ ಸ್ಪರ್ಧೆ ರೂ. 5,000/– ನಗದು ಬಹುಮಾನ
4. 5ನೇ ವರ್ಷದ ಎಂ.ರವಿಪ್ರಸಾದ್ ಸ್ಮರಣಾರ್ಥ ಹವ್ಯಾಸಿ ರಂಗನಟ/ನಟಿ ರಾಜ್ಯಮಟ್ಟದ ಪ್ರಶಸ್ತಿ, ರೂ. 10,000/– ನಗದು ಬಹುಮಾನ ಜೊತೆಗೆ ಸನ್ಮಾನ, ಪ್ರಶಸ್ತಿ ಫಲಕ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ

ನಿಯಮಗಳು

1. ಕಥೆ 2500 ಪದಗಳಿಗೆ ಮೀರಿರಬಾರದು.
2. ಪ್ರಬಂಧ 2000 ಪದಗಳಿಗೆ ಮೀರಿರಬಾರದು.
3. ಕವಿತೆ 24 ಸಾಲುಗಳನ್ನು ಮೀರಿರಬಾರದು. (ಇದು ಕಡ್ಡಾಯ)
4. ಈ ತನಕ ಬೇರೆಲ್ಲೂ – ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಸಾಮಾಜಿಕ ಜಾಲತಾಣ ಸೇರಿದಂತೆ ಎಲ್ಲೂ ಪ್ರಕಟವಾಗಿರಬಾರದು.
5. ಅನುವಾದಿತ ಕಥೆ / ಪ್ರಬಂಧ/ ಕವಿತೆಗಳಿಗೆ ಅವಕಾಶವಿಲ್ಲ. ಸ್ವತಂತ್ರ ರಚನೆಯಾಗಿರಬೇಕು
6. ಲೇಖನಗಳನ್ನು ನುಡಿ ತತ್ರಾಂಶ ಟೈಪ್ ಮಾಡಿಸಿ ಪತ್ರಿಕೆ ಇ–ಮೇಲ್‌ಗೆ ಕಳುಹಿಸಬೇಕು.
7. ಲೇಖಕರ ಭಾವಚಿತ್ರ, ವಿಳಾಸ, ದೂರವಾಣಿ ಸಂಖ್ಯೆ, ಇ–ಮೇಲ್ ವಿಳಾಸ ಮೊದಲಾದವುಗಳನ್ನು ಪ್ರತ್ಯೇಕ ಹಾಳೆಯಲ್ಲಿ ಕಡ್ಡಾಯವಾಗಿ ಬರೆದು ಲಗತ್ತಿಸಬೇಕು.
8. ಲಕೋಟೆಯ ಮೇಲೆ ಜೀವನಾಡಿ ಸಾಹಿತ್ಯ ಸ್ಪರ್ಧೆ – 2026 ಎಂದು ನಮೂದಿಸಿರಬೇಕು.
9. ಬಹುಮಾನಿತ ಕಥೆ, ಪ್ರಬಂಧ ಮತ್ತು ಕವನಗಳನ್ನು ಯಾವಾಗ ಬೇಕಾದರೂ, ಯಾವ ಸ್ವರೂಪದಲ್ಲಾದರೂ ಬಳಸುವಹಕ್ಕನ್ನುಜೀವನಾಡಿಪತ್ರಿಕೆಕಾಯ್ದಿರಿಸಿಕೊಂಡಿದೆ.
10. ಜೀವನಾಡಿ ಬಳಗದವರು ಈ ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
11. ಪ್ರವೇಶ ಶುಲ್ಕ ಇರುವುದಿಲ್ಲ. 12. ತೀರ್ಪುಗಾರರ ತೀರ್ಮಾನವೇ ಅಂತಿಮ.
12. ಈ ಸಂಬಂಧ ಪತ್ರ ವ್ಯವಹಾರಗಳಿಗೆ ಅವಕಾಶವಿಲ್ಲ.
13. ಕೊನೆಯ ದಿನಾಂಕ: 15–08–2026, ನಂತರ ಬಂದಪ್ರವೇಶಗಳನ್ನುಕಡ್ಡಾಯವಾಗಿಪರಿಗಣಿಸುವುದಿಲ್ಲ.

ವಿ.ಸೂ.: ಪ್ರಶಸ್ತಿ ವಿಜೇತರು ಖುದ್ದಾಗಿ ಹಾಜರಿದ್ದು, ಬಹುಮಾನದ ಹಣ ಪಡೆಯಬೇಕು. ಅವರ ಪರವಾಗಿ ಬರುವವರನ್ನು ಪರಿಗಣಿಸುವುದಿಲ್ಲ.

ಶಾಖಾ ಕಛೇರಿಗಳು : ಬೆಂಗಳೂರು ಕಛೇರಿ:
ಮುತ್ತುರಾಜ್, ಉಪಸಂಪಾದಕರು, #262, 13, ಇಖಖಖ ಲೇಔಟ್, ಕೂಡ್ಲು, ಬೆಂಗಳೂರು–68, ಮೊ.9845659517

ಹಾಸನ ಕಛೇರಿ:
ವಿಶ್ವಾಸ್ ಡಿ.ಗೌಡ, ಉಪಸಂಪಾದಕರು, 'ಗುರುಕೃಪ ನಿಲಯ' 1ನೇ ಮಹಡಿ, 1ನೇ ಮುಖ್ಯರಸ್ತೆ ವಿಶ್ವೇಶ್ವರಯ್ಯ ಬಡಾವಣೆ, 573201, .9743636831

ಮುಂಬಯಿ ಕಛೇರಿ:
ಗೋಪಾಲ ತ್ರಾಸಿ, ಉಪಸಂಪಾದಕರು, #ಎ–42, ಛೇಡಾ ಕಾಂಪ್ಲೆಕ್ಸ್, ಎಂ.ಜಿ.ರೋಡ್, ಚಾರ್ಕೋಪ್ ಗ್ರಾಮ, ಕಾಂದಿವಲಿ ಪಶ್ಚಿಮ, ೩–400067.: 9930262088

# ವಿಜಯದ ನಗುವಿದೆ ಅಡೆತಡೆಗಳ ಆಚೆ

## ಜಯ್ ನುಡಿ
(ವ್ಯಕ್ತಿತ್ವ ವಿಕಸನ ಕುರಿತ ಲೇಖನ ಮಾಲಿಕೆ)

■ ಉದಯರಶ್ಮಿ ದಿನಪತ್ರಿಕೆ

'ಕತ್ತಲೆಯ ದಾರಿಯಲ್ಲೂ ಗುರಿ ಸ್ಪಷ್ಟವಾಗಿದ್ದರೆ, ಬೆಳಕಿನ ಕಿರಣ ತಾನಾಗಿಯೇ ಹುಡುಕಿಕೊಂಡು ಬರುತ್ತದೆ.' ಎನ್ನುವ ಮಾತೊಂದಿದೆ. ಗುರಿಯಿಲ್ಲದ ಜೀವನ ಗರಿ ಬಿಚ್ಚಲು ಸಾಧ್ಯವಿಲ್ಲ ಎಂಬುದು ಸರ್ವವೇದ್ಯ. ಆದ್ದರಿಂದಲೇ ಪ್ರತಿಯೊಬ್ಬರಿಗೂ ಜೀವನದಲ್ಲಿ ತನ್ನದೇ ಆದ ಒಂದು ಗುರಿ ಇರಲೇಬೇಕಾಗುತ್ತದೆ. ಗುರಿಯನ್ನು ನಿರ್ಧರಿಸಿದ ಮಾತ್ರಕ್ಕೆ ಅದನ್ನು ತಲುಪಲಾಗುವುದಿಲ್ಲ. ಏಕೆಂದರೆ ಗುರಿ ಸಾಧನೆಯ ಹಾದಿ ಹೂವಿನ ಹಾಸಿಗೆ ಆಗಿರುವುದಿಲ್ಲ. ಅದು ಕಲ್ಲು ಮುಳ್ಳುಗಳಿಂದ ಕೂಡಿದ ಹಾದಿ. ಹೀಗಾಗಿಯೇ ಗುರಿಯನ್ನು ಹೊಂದಿದ ಎಲ್ಲರೂ ಸಾಧಕರಾಗುವುದಿಲ್ಲ. ಆ ಹಾದಿಯಲ್ಲಿ ಬರುವ ಕಲ್ಲು ಮುಳ್ಳುಗಳೆಂಬ ಅಡೆತಡೆಗಳನ್ನು ಯಾರು ಎದೆಗಾರಿಕೆಯಿಂದ ಎದುರಿಸುವ ಎದೆಯನ್ನು ಹೊಂದಿರುತ್ತಾರೋ ಅವರು ಮಾತ್ರ ಸಾಧಕರಾಗಬಲ್ಲರು. ಅಂದರೆ ಗುರಿಯ ದಾರಿಯಲ್ಲಿ ಅನೇಕ ತಡೆಗೋಡೆಗಳಿವೆ. ಯಾರು ಆ ಗೋಡೆಗಳನ್ನು ಧೈರ್ಯದಿಂದ ದಾಟುವ ಧೈರ್ಯ ಮಾಡುತ್ತಾರೋ ಅವರು ಇತಿಹಾಸ ಸೃಷ್ಟಿಸುತ್ತಾರೆ. ಈ ಮಾತಿಗೆ ಇತಿಹಾಸವೇ ಸಾಕ್ಷಿ.


'ಗುರಿ ತಲುಪುವ ಹಾದಿಯಲ್ಲಿ ಕಲ್ಲು



ಮುಳ್ಳುಗಳು ಇರುವುದು ಸಹಜ, ಆದರೆ ಅವು ನಿನ್ನನ್ನು ತಡೆಯಲು ಇರುವುದಲ್ಲ; ನಿನ್ನ ಹೆಜ್ಜೆಯ ವೇಗವನ್ನು ಪರೀಕ್ಷಿಸಲು ಇರುವುದು.' ಎಂಬುದನ್ನು ಮನದಟ್ಟು ಮಾಡಿಕೊಂಡು ಗುರಿಯ ಹಾದಿಯಲ್ಲಿ ಬರುವ ಆಂತರಿಕ ಟ ತಡೆಗೋಡೆಗಳನ್ನು ತಡೆಯುವುದು ಹೇಗೆ ನೋಡೋಣ ಬನ್ನಿ.

### ಯೋಜನೆಯ ಕೊರತೆ

ಪರೀಕ್ಷೆಗೆ ಮುನ್ನ ನಾನು ರ್ಯಾಂಕ್



ಪಡೆಯಬೇಕೆಂದು ಗುರಿ ಇಟ್ಟರೆ ಸಾಲದು. ದಿನಾಲೂ ಯಾವಾಗ ಓದಬೇಕು? ಎಷ್ಟು ಗಂಟೆ ಓದಬೇಕು? ಯಾವ ವಿಷಯ ಓದಬೇಕು ಎನ್ನುವ ಯೋಜನೆ ಹಾಕಿಕೊಳ್ಳಬೇಕು. ಯೋಜನೆ ಇರದಿದ್ದರೆ ರ್ಯಾಂಕ್ ಕನಸಾಗಿಯೇ ಉಳಿಯುತ್ತದೆ. ಅಲನ್ ಲಕಿನ್ ಉಲ್ಲೇಖದಂತೆ,' ಉತ್ತಮ ಯೋಜನೆ ಎಂದರೆ ಭವಿಷ್ಯವನ್ನು ವರ್ತಮಾನಕ್ಕೆ ತರುವುದು, ಇದರಿಂದ ನೀವು ಈಗಲೇ ಅದರ ಬಗ್ಗೆ ಏನಾದರೂ ಮಾಡಬಹುದು.' ಯೋಜನೆಯಿಲ್ಲದೇ ಗುರಿಯ ದಾರಿ ಅಸ್ತವ್ಯಸ್ತಗೊಳ್ಳುತ್ತದೆ. ಅಲ್ಲದೇ ಕೊನೆಯ ಕ್ಷಣದಲ್ಲಿ ಆತಂಕವನ್ನು ಹೆಚ್ಚಿಸುತ್ತದೆ. ಸರಿಯಾದ ಕಾಲಮಿತಿಯ ಯೋಜನೆಯನ್ನು ರೂಪಿಸಿಕೊಳ್ಳುವುದರ ಕೊರತೆಯು ಸಹ ಗುರಿ ಸಾಧನೆಯಲ್ಲಿ ತಡೆಗೋಡೆಯನ್ನು ನಿರ್ಮಿಸುತ್ತದೆ.'ಯೋಜನೆ ಎನ್ನುವುದು ಕತ್ತಲ ದಾರಿಯಲ್ಲಿ ನಮ್ಮ ಕೈಲಿರುವ ದೀಪದಂತೆ; ಅದು ನಮಗೆ ಮುಂದಿನ ಹೆಜ್ಜೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಯಾವುದೇ ಗುರಿಯ ಸಾಧನೆಗೆ ಯೋಜನೆ ಬಹುಮುಖ್ಯವಾಗಿದೆ. ಗುರಿಯ ಹಾದಿಯಲ್ಲಿ ಬರಬಹುದಾದ ಸಮಸ್ಯೆಗಳನ್ನು ಮೊದಲೇ ಊಹಿಸಿ ಅವುಗಳಿಗೆ ಪರ್ಯಾಯ ಮಾರ್ಗಗಳನ್ನು ಸಿದ್ಧವಾಗಿಟ್ಟುಕೊಳ್ಳಲು ಯೋಜನೆ ಸಹಾಯ ಮಾಡುತ್ತದೆ. ಬೆಂಜಮಿನ್ ಫ್ರಾಂಕ್ಲಿನ್ ಹೇಳಿದಂತೆ,' ಯೋಜನೆ ರೂಪಿಸಲು ವಿಫಲರಾಗುವುದು ಎಂದರೆ, ನೀವು ಸೋಲಲು ಯೋಜನೆ ರೂಪಿಸುತ್ತಿದ್ದೀರಿ ಎಂದರ್ಥ.' ಸರಿಯಾದ ಯೋಜನೆ ಇದ್ದರೆ ಕೆಲವನ್ನು ಯಾವಾಗ ಮಾಡಬೇಕು ಎಂಬ ಸ್ಪಷ್ಟತೆ ಸಿಗುತ್ತದೆ. ಇದರಿಂದ ಅನಗತ್ಯ ಗೊಂದಲಗಳು ನಿವಾರಣೆಯಾಗುತ್ತವೆ. ಅದಲ್ಲದೇ ಅಮೂಲ್ಯ ಸಮಯವೂ ಉಳಿಯುತ್ತದೆ.

### ಗಮನ ಭಂಗ

ಗುರಿ ಸಾಧನೆಯಲ್ಲಿ ಮೊತ್ತಮೊದಲ ಅಡೆತಡೆ ಎಂದರೆ ಗುರಿಯನ್ನು ನಿರ್ಧರಿಸುವುದು ಆದರೆ ಅದರತ್ತ ಗಮನ ಹರಿಸದೇ ಇರುವುದು. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳತ್ತ ಚಿತ್ತ ಹರಿಬಿಡುವುದೇ ಹೆಚ್ಚಾಗಿದೆ. ಅದರಲ್ಲೂ ಅನಗತ್ಯ ಮನರಂಜನೆ ಕಡೆಗೆ ಮನಸ್ಸು ವಾಲುತ್ತಿದೆ. ವಾಟ್ಸಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂಗಳಲ್ಲಿ ದಿನಗಳೆಯುತ್ತಿದ್ದರೆ ಗುರಿ ಸಾಧನೆ ಅಲ್ಲೇ ಉಳಿಯುವುದು. 'ಯಾವುದಾದರೂ ಒಂದು ದೊಡ್ಡ ಗುರಿಯನ್ನು ನಿಮ್ಮ ಜೀವನದ ಮಹಾತ್ವಾಕಾಂಕ್ಷೆಯನ್ನಾಗಿ ಮಾಡಿಕೊಳ್ಳಿ. ಅದರ ಬಗ್ಗೆಯೇ ಯೋಚಿಸಿ, ಅದರ ಕನಸು ಕಾಣಿ ಮತ್ತು ಆ ಗುರಿಯಲ್ಲೇ ಬದುಕಿ.' ಎಂದಿದ್ದಾರೆ ಸ್ವಾಮಿ ವಿವೇಕಾನಂದರು. ಅವರ ದಿವ್ಯವಾಣಿಯಂತೆ ಗುರಿ ದಾರಿಯಲ್ಲಿ ನಡೆಯುವುದನ್ನು ರೂಢಿಸಿಕೊಳ್ಳಬೇಕು. ಅದರಂತೆಯೇ 'ನಿಮ್ಮ ಗುರಿ ಸಣ್ಣದಾಗಿರುವುದು ದೊಡ್ಡ ಅಪರಾಧ, ಯಾವಾಗಲೂ ನಿಮ್ಮ ಗುರಿ ಆಕಾಶದಷ್ಟು ಎತ್ತರವಾಗಿರಲಿ.' ಎನ್ನುವ ಸ್ಪೂರ್ತಿದಾಯಕ ನುಡಿ ಅಬ್ದುಲ್ ಕಲಾಂಜಿಯವರದು.

### ಆಲಸ್ಯತನ


'ಆಲಸ್ಯತನ ಏಳಗೊಡುವುದಿಲ್ಲ, ಉತ್ಸಾಹ ಕೂಡ್ರಿಸಿಕೊಡುವುದಿಲ್ಲ.' ಎನ್ನುವ ಮಾತಿನಂತೆ ಆಲಸ್ಯತನಕ್ಕೆ ಬಲಿಯಾದರೆ ಕಥೆ ಮುಗಿದಂತೆಯೇ ಸರಿ. ಅದು ನಮಗೆ ಕೆಲಸವನ್ನು ಮುಂದೂಡುವುದನ್ನು ಚೆನ್ನಾಗಿ ಕಲಿಸುತ್ತದೆ. ಮುಂದೂಡುವುದರಿಂದ ಗುರಿಗಳು ಗುರಿಗಳೇ ಆಗಿ ಉಳಿಯುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ. ಕೇವಲ ಆಸೆಪಡುವುದರಿಂದ ಅಥವಾ ಕನಸು ಕಾಣುವುದರಿಂದ ಗುರಿ ಸಾಧಿಸಲು ಸಾಧ್ಯವಿಲ್ಲ. ಆ ಕನಸಿಗೆ ಜೀವ ತುಂಬಬೇಕು. ಅದನ್ನು ನನಸಾಗಿಸುವ ಏಕೈಕ ಶಕ್ತಿ ಇರುವುದು ಶ್ರಮದಲ್ಲಿ ಮಾತ್ರ. 'ಗುರಿಯಿರಲಿ ಸಿಂಹದಂತೆ, ಶ್ರಮವಿರಲಿ ಮೌನದಂತೆ.' ಶ್ರಮವಿಲ್ಲದ ಗುರಿ ಕೇವಲ ಹಗಲುಗನಸಾಗಿ ಉಳಿಯುತ್ತದೆ. ನಿರಂತರ ಶ್ರಮಪಟ್ಟಾಗ ಅದರಲ್ಲಿರುವ ತಪ್ಪುಗಳನ್ನು ತಿದ್ದಿಕೊಳ್ಳುತ್ತ ದಿನದಿಂದ ದಿನಕ್ಕೆ ಉತ್ತಮಗೊಳ್ಳಬಹುದು ಮತ್ತು ಪರಿಣಿತಿ ಪಡೆಯಲು ಸಾಧ್ಯ. ಅದಲ್ಲದೇ ಶ್ರಮವು ಗುರಿಗೆ ಬೇಕಾದ ಶಿಸ್ತು ಮತ್ತು ಸಮಯಪ್ರಜ್ಞೆಯನ್ನು ಬೆಳೆಸುತ್ತದೆ. ಸಾಧನೆಯ ಹಾದಿಯಲ್ಲಿ ಕಠಿಣ



ಶ್ರಮದ ಪಾತ್ರ ಅತ್ಯಂದ ದೊಡ್ಡದಾಗಿದೆ. ಇನ್ನೊಂದು ಗಮನಾರ್ಹ ಸಂಗತಿ ಎಂದರೆ 'ಶ್ರಮ ಪಡುವವನಿಗೆ ಅದೃಷ್ಟವೂ ಬೆನ್ನ ಹಿಂದೆ ನಿಲ್ಲುತ್ತದೆ.' 'ಬೇರೆಯವರಿಗಿಂತ ವೇಗವಾಗಿ ಓಡುವುದಲ್ಲ ಜೀವನ, ನಿಮ್ಮದೇ ಆದ ಒಂದು ಗುರಿಯನ್ನು ಇಟ್ಟುಕೊಂಡು ಅದನ್ನು ತಲುಪುವವರೆಗೆ ಶ್ರಮಿಸುವುದೇ ಜೀವನ.'

### ಭಯ


ಸೋಲಿನ ಭಯ ನಮ್ಮನ್ನು ನಿಷ್ಕ್ರೀಯರನ್ನಾಗಿಸುತ್ತದೆ. ಹೊಸ ಅವಕಾಶಗಳನ್ನು ಒಪ್ಪಿಕೊಳ್ಳಲು ಹಿಂಜರಿಯುವಂತೆ ಮಾಡುತ್ತದೆ. 'ಸೋಲಿಗೆ ಹೆದರಿ ಗುರಿ ಬದಲಿಸಬೇಡ, ಗೆಲ್ಲುವ ತನಕ ನಿನ್ನ ಪ್ರಯತ್ನದ ದಾರಿಯನ್ನು ಬದಲಿಸು.' ಭಯವು ಗುರಿಯನ್ನು



ಧೂಳಿಪಟ ಮಾಡುತ್ತದೆ. ಯಾವುದೇ ಗುರಿಯನ್ನು ಬೆನ್ನಟ್ಟುವ ಮುನ್ನವೇ 'ನಾನು ಇದರಲ್ಲಿ ಸೋತರೆ ಮನೆಯವರು ಏನನ್ನುತ್ತಾರೋ? ಸಮಾಜ ಹೇಗೆ ಪ್ರತಿಕ್ರಿಯಿಸುತ್ತದೆಯೋ ಎಂಬ ನಕಾರಾತ್ಮಕ ಯೋಚನೆ ಅಂದರೆ ಭಯ ಕಾಡುತ್ತದೆ. 'ನನ್ನಲ್ಲಿ ಇತರರಿಗಿಂತ ಪ್ರತಿಭೆ ಕಡಿಮೆಯಿದೆ' ಎನ್ನುವ ಕೀಳರಿಮೆಯೂ ಕಾಡುತ್ತದೆ. ಇದಕ್ಕೆ ಕಾರಣ ಪೋಷಕರು, ಸ್ನೇಹಿತರು, ಸಮಾಜ ನಮ್ಮಿಂದ ಸದಾ ಗೆಲುವನ್ನೇ ನಿರೀಕ್ಷಿಸುತ್ತಾರೆ ಎಂಬ ಅತಿಯಾದ ಒತ್ತಡ. ಸೋಲು ಎನ್ನುವುದು ಬದುಕಿನ ಅಂತ್ಯವಲ್ಲ. ಅದು ಒಂದು ಉತ್ತಮ ಪಾಠ. 'ನಾನು ಸೋತೆ' ಎನ್ನುವುದಕ್ಕಿಂತ 'ಹೊಸದನ್ನು ಕಲಿತೆ' ಎಂದು ಯೋಚಿಸಬೇಕು. ಸೋಲಿನತ್ತ ನೋಡುವ ದೃಷ್ಟಿಕೋನವನ್ನು ಬದಲಿಸಬೇಕು. 'ನೋಡಬೇಕಾದ ದೃಷ್ಟಿ ಬದಲಾದರೆ ಸಾಲದು ತಲುಪಬೇಕಾದ ಗುರಿ ನೆಟ್ಟಗಿರಬೇಕು.' ಸೋಲಿನ ಭಯದಿಂದ ದೂರ ಓಡಿದಷ್ಟೂ ಗೆಲುವು ಮತ್ತಷ್ಟು ಮುಂದೆ ಓಡುತ್ತದೆ ಕಾಡುತ್ತದೆ. ಯಾರು ಸೋಲಿಗೆ ಹೆದರುತ್ತಾರೋ, ಅವರು ಎಂದಿಗೂ ಗೆಲುವಿನ ರುಚಿಯನ್ನು ಸವಿಯಲು ಸಾಧ್ಯವಿಲ್ಲ. ಏಕೆಂದರೆ ಪ್ರಯತ್ನವೇ ಗೆಲುವಿನ ಮೊದಲ ಹೆಜ್ಜೆ.' ಎಂಬುದನ್ನು ನೆನಪಿನಲ್ಲಿಟ್ಟು ಗುರಿಯತ್ತ ಹೆಜ್ಜೆ ಹಾಕಬೇಕು.

### ತಾಳ್ಮೆ

ಇಂದಿನ ದಿನಗಳಲ್ಲಿ ನಮಗೆಲ್ಲ ತಕ್ಷಣದ ಯಶಸ್ಸು ಬೇಕಾಗಿದೆ. 'ನದಿಗಳು ಕಲ್ಲು ಬಂಡೆಗಳನ್ನು ಒಡೆದು ಮುನ್ನುಗ್ಗುವುದು ತನ್ನ ಶಕ್ತಿಯಿಂದಲ್ಲ. ಬದಲಿಗೆ ತನ್ನ ನಿರಂತರವಾದ ತಾಳ್ಮೆಯ ಹರಿವಿನಿಂದ. ಹಾಗೆಯೇ ಗುರಿ ಸಾಧನೆಯು ರಾತ್ರೋರಾತ್ರಿ ಆಗುವುದಿಲ್ಲ. ಅದಕ್ಕೆ ಅವಿರತ ಶ್ರಮದ ಜೊತೆಗೆ ತಾಳ್ಮೆ ಬೇಕು. ಬಹುತೇಕರು ತಾಳ್ಮೆ ಎಂದರೆ ಸುಮ್ಮನೇ ಕುಳಿತುಕೊಳ್ಳುವುದು ಎಂದು ತಪ್ಪಾಗಿ ತಿಳಿಯುತ್ತಾರೆ. ಆದ–



'ರೆ ನಿಜವಾದ ತಾಳ್ಮೆ ಎಂದರೆ, ಗುರಿಗಾಗಿ ದಿನವೂ ಹೆಜ್ಜೆ ಹಾಕುವುದು. ಮತ್ತು ಸರಿಯಾದ ಫಲಿತಾಂಶಕ್ಕಾಗಿ ಧೃತಿಗೆಡದೆ ಕಾಯುವ ಸಕಾರಾತ್ಮಕ ಮನಸ್ಥಿತಿಯಾಗಿದೆ. ತಾಳ್ಮೆಯಿಲ್ಲದ ಸಾಧನೆ ಅರ್ಧಕ್ಕೆ ನಿಂತುಹೋಗುವ ಹಡಗಿನಂತೆ. ತಾಳ್ಮೆಯಿಲ್ಲದವನು ಮೊದಲ ಪ್ರಯತ್ನ ಫಲ ನೀಡದಿದ್ದರೆ ಗುರಿಯನ್ನು ಬಿಟ್ಟು ಬಿಡುತ್ತಾನೆ. ಗುರಿ ಸಾಧನೆಯ ಹಾದಿಯಲ್ಲಿ ಸಮಸ್ಯೆಗಳು ಕಷ್ಟಗಳು ಸಾಮಾನ್ಯ. ಅವೆಲ್ಲ ತಾತ್ಕಾಲಿಕ ಎಂದು ತಿಳಿಯಬೇಕು. ಅವುಗಳಿಗೆ ಬೇಸರಿಸಿಕೊಳ್ಳದೇ ಸಹಿಸಿಕೊಳ್ಳಬೇಕು. ಬೀಜವೊಂದು ದೊಡ್ಡ ಮರವಾಗಲು ಸಮಯ ಬೇಕಾಗುತ್ತದೆ. ಅಂತೆಯೇ ನಮ್ಮ ಶ್ರಮವೂ ಫಲ ನೀಡಲು ಸಮಯ ಬೇಕಾಗುತ್ತದೆ.

### ಕೊನೆ ಹನಿ

ತಡೆಗೋಡೆಗಳು ನಮ್ಮನ್ನು ತಡೆಯಲು ಬರುವುದಿಲ್ಲ. ಬದಲಿಗೆ ಗುರಿಯತ್ತ ನಮ್ಮಲ್ಲಿರುವ ಹಂಬಲವನ್ನು, ಛಲವನ್ನು ಪರೀಕ್ಷಿಸಲು ಬರುತ್ತವೆ. ನಮ್ಮಲ್ಲಿರುವ ಶಕ್ತಿಯನ್ನು ಹೊರತರಲು ಬರುತ್ತವೆ. ಎಲ್ಲ ಆಂತರಿಕ ಗೋಡೆಗಳನ್ನು ಧ್ವಂಸ ಮಾಡಿದರೆ ಯಾವ ತಡೆಗೋಡೆಯೂ ನಮ್ಮ ಗುರಿ ಸಾಧನೆಯನ್ನು ತಡೆಯಲು ಸಾಧ್ಯವಿಲ್ಲ. ಅಡೆತಡೆ ತಡೆದರೆ ವಿಜಯದ ನಗು ಬಿರಿಯುತ್ತದೆ. ಗೆಲುವು ನಮ್ಮನ್ನು ಬಾಚಿ ತಬ್ಬಿಕೊಳ್ಳುತ್ತದೆ.

ಲೇಖನ
– ಜಯಶ್ರೀ.ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
9449234142



## ವಿಜಯಪುರದಲ್ಲಿ ನಡೆದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಆನಂದ್ ಕೆ. ಅಭಿಮತ

# ದೋಷರಹಿತ ಮತದಾರರ ಪಟ್ಟಿಗೆ ರಾಜಕೀಯ ಪಕ್ಷಗಳ ಸಹಕಾರ ಅಗತ್ಯ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ದೋಷರಹಿತ ಹಾಗೂ ಪಾರದರ್ಶಕ ಮತದಾರರ ಪಟ್ಟಿ ಸಿದ್ಧಪಡಿಸುವಲ್ಲಿ ವಿವಿಧ ರಾಜಕೀಯ ಪಕ್ಷಗಳು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ಜಿಲ್ಲಾ ಚುನಾವಣಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಡಾ. ಆನಂದ್ ಕೆ. ಅವರು ಹೇಳಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಉತ್ತಮವಾಗಿ ನಡೆಯುತ್ತಿದೆ. ಯಾವುದೇ ಗೊಂದಲಗಳಿಲ್ಲದೆ ನಿಖರವಾದ ಮತದಾರರ ಪಟ್ಟಿ ತಯಾರಿಸಲು ರಾಜಕೀಯ ಪಕ್ಷಗಳ ಸಹಕಾರ ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದರು. ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಹಾಗೂ ದೋಷ ಸರಿಪಡಿಸುವ ನಿಟ್ಟಿನಲ್ಲಿ ಎಲ್ಲರೂ ಜವಾಬ್ದಾರಿಯಿಂದ ಕೆಲಸ ಮಾಡಬೇಕು. ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಪ್ರಗತಿಯಲ್ಲಿದ್ದು, ಬಿ.ಎಲ್.ಓ.ಗಳು ಮನೆ ಮನೆಗೆ ಭೇಟಿ ನೀಡಿ ನಿಖರ ಮಾಹಿತಿ ಸಂಗ್ರಹಿಸುತ್ತಿದ್ದು, ರಾಜಕೀಯಕ ಪಕ್ಷಗಳ ಏಜೆಂಟರು ಸೂಕ್ತ ಸಹಕಾರ ನೀಡಬೇಕು. ಎಸ್.ಐ.ಆರ್ ನೋಂದಣಿಯ ಮಹತ್ವ ಸಾರಲು ಸಭೆಗಳನ್ನಷ್ಟೆಅಲ್ಲದೆ ಶಾಲೆ–ಕಾಲೇಜುಗಳು ಸೇರಿದಂತೆ ವಿವಿಧ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಲಾಗಿದೆ. ಮತಗಟ್ಟೆವಾರು ಮತದಾರರ ಪಟ್ಟಿಯನ್ನು ರಾಜಕೀಯ ಪಕ್ಷಗಳಿಗೆ ನೀಡಲಾಗಿದೆ. ಚುನಾವಣಾ ಆಯೋಗದ ನಿರ್ದೇಶನದಂತೆ ಈ ಕಾರ್ಯಕ್ಕೆ ತಮ್ಮ ಸಹಕಾರ ಅಗತ್ಯ. ಎಂದು ಜಿಲ್ಲಾಧಿಕಾರಿಗಳು ರಾಜಕೀಯ ಪ್ರತಿನಿಧಿಗಳಿಗೆ ಮನವಿ ಮಾಡಿದರು.ಸಭೆಯಲ್ಲಿ ಚುನಾವಣಾ ತಹಶೀಲ್ದಾರರಾದ ಪ್ರೇಮಸಿಂಗ್ ಪವಾರ, ಸಚ್ಚಿದಾನಂದ ತೇರದಾಳ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಬಬಲೇಶ್ವರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಪಿ.ಜಿ.ಗಡೇದ ಪ್ರಕಟಣೆ

# ಸೆಪ್ಟಿಕ್ ಟ್ಯಾಂಕ್ ಕೆಲಸಗಾರರ ಮೂಲಕ ಸ್ವಚ್ಛಗೊಳಿಸುವುದು ಅಪರಾಧ

■ ಉದಯರಶ್ಮಿ ದಿನಪತ್ರಿಕೆ

ಬಬಲೇಶ್ವರ: ಪಟ್ಟಣದ ಎಲ್ಲಾ ಮನೆಗಳಲ್ಲಿ ಇರುವ ಶೌಚಾಲಯದ ಸೆಪ್ಟಿಕ್ ಟ್ಯಾಂಕ್‌ಗಳು ತುಂಬಿದಾಗ ಸೆಪ್ಟಿಕ್ ಟ್ಯಾಂಕ್‌ಗಳನ್ನು ಕೆಲಸಗಾರರ ಮೂಲಕ ನೇರವಾಗಿ ಸ್ವಚ್ಛಗೊಳಿಸುವುದು ಮ್ಯಾನುವಲ್ ಸ್ಕ್ಯಾವೇಂಜರ್ ಕಾಯ್ದೆ 2013 ರ ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದ್ದು, ಸಾರ್ವಜನಿಕರು ಕೆಲಸಗಾರರ ಮೂಲಕ ಸೆಪ್ಟಿಕ್ ಟ್ಯಾಂಕ್ ಸ್ವಚ್ಛಗೊಳಿಸಿದ್ದಲ್ಲಿ ಅಂತವರ ಮೇಲೆ ಮ್ಯಾನುವಲ್ ಸ್ಕ್ಯಾವೇಂಜರ್ ಕಾಯ್ದೆ 2013 ರ ಪ್ರಕಾರ ಶಿಸ್ತು ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಪಿ.ಜಿ.ಗಡೇದ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಪಟ್ಟಣದ ಯಾವುದೇ ಮನೆಗಳಲ್ಲಿ ಸೆಪ್ಟಿಕ್ ಟ್ಯಾಂಕ್‌ಗಳು ತುಂಬಿದಾಗ ತಾವು ಪ್ರೈವೇಟ್ ಸಕ್ಕಿಂಗ್ ಮಶೀನ್ ವಾಹನವನ್ನು ಬಾಡಿಗೆಗೆ ಹೇಳುತ್ತಿರುತ್ತಿರಿ. ಅದರಂತೆ ಇನ್ನು ಮುಂದೆ ತಮ್ಮ ಸೆಪ್ಟಿಕ್ ಟ್ಯಾಂಕ್ನು ಪ್ರೈವೇಟ್ ಸಕ್ಕಿಂಗ್ ಮಷಿನ್ ರವರ ಹತ್ತಿರ ಕ್ಲೀನ್ ಮಾಡಿಸುವ ಮುನ್ನ ಪಟ್ಟಣ ಪಂಚಾಯತ ಕಾರ್ಯಾಲಯಕ್ಕೆ ತಿಳಿಸುವುದು ಕಡ್ಡಾಯವಾಗಿರುತ್ತದೆ.

ಸಕ್ಕಿಂಗ್ ಮಷೀನ್ ವಾಹನದ ಮಾಲೀಕರು ತಾವು ಬಬಲೇಶ್ವರ ಪಟ್ಟಣದ ವ್ಯಾಪ್ತಿಯಲ್ಲಿ ಸೆಪ್ಟಿಕ್ ಟ್ಯಾಂಕನ್ನು ಕ್ಲಿನ್ ಮಾಡಿ ಸಂಗ್ರಹಿಸಿದ ಮಲತ್ಯಾಜ್ಯವನ್ನು ಕಾಲುವೆ, ಕೆರೆ, ಸಾರ್ವಜನಿಕ ಸ್ಥಳ ಹಾಗೂ ಎಲ್ಲೆಂದರಲ್ಲಿ ಅನಧಿಕೃತವಾಗಿ ವಿಸರ್ಜಿಸಿದರೆ ಪರಿಸರ ಸಂರಕ್ಷಣಾ ಕಾಯ್ದೆ 1986, ಜಲ (ಮಾಲಿನ್ಯ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ 1974 , ಪುರಸಭೆ ಕಾಯ್ದೆ 1964 ಹಾಗೂ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ (ಎನ್‌ಜಿಟಿ) ಕಠಿಣ ನಿರ್ದೇಶನಗಳ ಪ್ರಕಾರ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಪಟ್ಟಣ ಪಂಚಾಯತಿಯಿಂದ ನೂತನವಾಗಿ (ಎಫ್‌ಎಸ್‌ಟಿಪಿ) ಘಟಕ ಪ್ರಾರಂಭವಾಗಿದ್ದು ಇನ್ನು ಮುಂದೆ ಸಕ್ಕಿಂಗ್ ಮಶೀನ್ ವಾಹನದ ಮಾಲೀಕರು ಬಬಲೇಶ್ವರ ಪಟ್ಟಣದ ವ್ಯಾಪ್ತಿಯಲ್ಲಿ ಸಂಗ್ರಹಿಸಿದ ಮಲ ತ್ಯಾಜ್ಯವನ್ನು ಪಟ್ಟಣ ಪಂಚಾಯತಿಯ (ಎಫ್‌ಎಸ್‌ಟಿಪಿ) ಘಟಕಕ್ಕೆ ಕಡ್ಡಾಯವಾಗಿ ನೀಡತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಬಬಲೇಶ್ವರ ಪಟ್ಟಣ ಪಂಚಾಯತ ಕಾರ್ಯಾಲಯದ ಸಮಯದಲ್ಲಿ ಆರೋಗ್ಯ ಶಾಖೆಗೆ ಭೇಟಿಯಾಗಲು ಮುಖ್ಯಾಧಿಕಾರಿಗಳು ಹಾಗೂ ಆಡಳಿತಾಧಿಕಾರಿಗಳು ಪ್ರಕಟಣೆ ಮೂಲಕ ತಿಳಿಸಿದ್ದಾರೆ



ಸಂಗ್ರಹ ಚಿತ್ರ



## ಪ್ರಜಾಪ್ರಭುತ್ವದ ಮೌಲ್ಯಗಳ ಅರಿವು ಮೂಡಿಸುವ ಚುನಾವಣೆ

■ ಉದಯರಶ್ಮಿ ದಿನಪತ್ರಿಕೆ

ಜಮಖಂಡಿ: ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಮತದಾನದ ಮಹತ್ವದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಚಿಕ್ಕಪಡಸಲಗಿಯ ರಾಯಲ್ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶೈಕ್ಷಣಿಕ ಚುನಾವಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಹಾಗೂ ನೈಜ ಚುನಾವಣಾ ಮಾದರಿಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಆಂಗ್ಲ ಭಾಷಾ ಶಿಕ್ಷಕ ಶ್ರೀ ಸಂಗಮೇಶ ತೇಲಿಯವರು, ವಿದ್ಯಾರ್ಥಿ ಜೀವನದಲ್ಲಿಯೇ ಪ್ರಜಾಪ್ರಭುತ್ವದ ತತ್ವಗಳನ್ನು ಅರಿತುಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ಮತದಾನದ ಹಕ್ಕಿನ ಮಹತ್ವ, ಉತ್ತಮ ನಾಯಕನನ್ನು ಆಯ್ಕೆ ಮಾಡುವ ಜವಾಬ್ದಾರಿ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ತತ್ವಗಳನ್ನು ಇಂತಹ ಶೈಕ್ಷಣಿಕ ಚುನಾವಣೆಗಳ ಮೂಲಕ ವಿದ್ಯಾರ್ಥಿಗಳು ಪ್ರಾಯೋಗಿಕವಾಗಿ ಕಲಿಯುತ್ತಾರೆ ಎಂದು ತಿಳಿಸಿದರು. ಶಾಲೆಯ ಮುಖ್ಯಮಂತ್ರಿ ಸೇರಿದಂತೆ ವಿವಿಧ ಸಚಿವ ಸಂಪುಟದ ಹುದ್ದೆಗಳಿಗೆ ಚುನಾವಣೆ ನಡೆಸಲಾಯಿತು. ನಾಮಪತ್ರ ಸಲ್ಲಿಕೆ, ಅಭ್ಯರ್ಥಿಗಳ ಪ್ರಚಾರ, ಮತದಾನ, ಮತದಾರರ ಬೆರಳಿಗೆ ಶಾಯಿ ಗುರುತು ಹಾಕುವುದು, ಮತ ಎಣಿಕೆ, ಫಲಿತಾಂಶ ಪ್ರಕಟಣೆ ಹಾಗೂ ಆಯ್ಕೆಯಾದ ಪ್ರತಿನಿಧಿಗಳ ಪ್ರಮಾಣವಚನ ಸ್ವೀಕಾರದವರೆಗೆ ಸಂಪೂರ್ಣ ಚುನಾವಣಾ ಪ್ರಕ್ರಿಯೆಯನ್ನು ನೈಜ ಚುನಾವಣೆಯ ಮಾದರಿಯಲ್ಲೇ ಆಯೋಜಿಸಲಾಗಿದ್ದು, ವಿದ್ಯಾರ್ಥಿಗಳಲ್ಲಿ ವಿಶೇಷ ಉತ್ಸಾಹ ಮತ್ತು ಕುತೂಹಲ ಮೂಡಿಸಿತು.

ಚುನಾವಣಾ ಆಯುಕ್ತರಾಗಿ ಮುಖ್ಯಗುರು ಪಿ. ಬಿ. ಕಲ್ಯಾಣಿ, ರಿಟರ್ನಿಂಗ್ ಅಧಿಕಾರಿಯಾಗಿ ಸಿ. ಪಿ. ಹೊಸಪೇಟಿ, ಕಾವೇರಿ ಹಿರೇಮಠ ಹಾಗೂ ಲಕ್ಷ್ಮೀ ಕಲ್ಯಾಣಿ ಕಾರ್ಯನಿರ್ವಹಿಸಿದರು. ಚುನಾವಣಾ ಅಧಿಕಾರಿಗಳಾಗಿ ಪ್ರೀತಿ ಮಾಲೋಜಿ, ಅಶ್ವಿನಿ ಕಲ್ಯಾಣಿ, ರೂಪಾ ಪಿಡಶೆಟ್ಟಿ ಮತ್ತು ಕುಮಾರ ಸಿದ್ದೋಜಿ ಚುನಾವಣೆಯ ಸಂಪೂರ್ಣ ಉಸ್ತುವಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷ ನಂದೆಪ್ಪ ಕಾರಜೋಳ ಹಾಗೂ ಕಾರ್ಯದರ್ಶಿ ಜಿನಗೊಂಡ ಸಿದ್ದೋಜಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಪರಿಚಯಿಸುವ ಇಂತಹ ಶೈಕ್ಷಣಿಕ ಚಟುವಟಿಕೆಗಳು ಅತ್ಯಂತ ಶ್ಲಾಘನೀಯವಾಗಿದ್ದು, ಭವಿಷ್ಯದಲ್ಲಿ ಜವಾಬ್ದಾರಿಯುತ ನಾಗರಿಕರನ್ನು ರೂಪಿಸಲು ಸಹಕಾರಿಯಾಗಲಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.




## ಯುವಕರು ಕೆಟ್ಟ ವ್ಯಸನಗಳಿಗೆ ಬಲಿಯಾಗಬಾರದು :ಎಸ್ಪಿ ನಿಂಬರಗಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಶ್ರೀ ಸಿದ್ದೇಶ್ವರ ಕಲಾಭವನದಲ್ಲಿ ರೈಸ್ ಜಾಗೃತಿ ಅಭಿಯಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಇಂತಹ ರೈಸ್ ದುಶ್ಚಟಗಳ ಜಾಗೃತಿ ಅಭಿಯಾನ ಕಾರ್ಯಕ್ರಮ ಕೇವಲ ಇಲಾಖೆಯಿಂದ ಮತ್ತು ಸರ್ಕಾರದಿಂದ ನಿಯಂತ್ರಣ ಮಾಡಲು ಸಾಧ್ಯವಿಲ್ಲ. ಈ ದೇಶದ ಪ್ರತಿಯೊಬ್ಬ ಯುವ ಸಮೂಹದ ಜವಾಬ್ದಾರಿ ಇದೆ. ಸಾಕಷ್ಟು ಯುವ ಸಮೂಹ ಬಲಿಯಾಗುತ್ತಿದ್ದು ತಮ್ಮ ಭವಿಷ್ಯದ ಗಮನಹರಿಸದೆ ಇಂತಹ ವ್ಯಸನಕ್ಕೆ ತಮ್ಮ ಜೀವನ ಹಾಳು ಮಾಡಿಕೊಳುತ್ತಿದ್ದಾರೆ. ಯಾವುದೆ ಕಾರಣ–ಕ್ಕೂ ಯುವಕರು ಬಲಿಯಾಗಬಾರದು ಎಂದು ಜಾಗೃತಿ ಮೂಡಿಸಿದರು. ಜಿಲ್ಲಾ ಯುವ ಪರಿಷತ್ ಅಧ್ಯಕ್ಷ ಶರಣು ಸಬರದ ಮಾತನಾಡಿ, ಯುವಕರು ತಮ್ಮ ಗುರಿ ಮುಟ್ಟುವ ಕಡೆ ಹೆಚ್ಚು ಗಮನ ಹರಿಸಿ ತಂದೆ ತಾಯಿಗಳ ಕನಸು ನನಸಾಗುವ ನಿಟ್ಟಿನಲ್ಲಿ ಬದಕನ್ನು ಕಟ್ಟಿಕೊಳ್ಳಬೇಕು ಎಂದರು.

ಡಾ.ದೀಪಾ ರೆಡ್ಡಿ, ಅಧ್ಯಕ್ಷತೆ ವಹಿಸಿದ ಶರಣಯ್ಯ ಭಂಡಾರಿ ಮಠ ಮಾತನಾಡಿದರು.

ಪ್ರಸ್ತಾವಿಕವಾಗಿ ಸಿಪಿಐ ಪ್ರದೀಪ್ ತಳಕೇರಿ ಮಾತನಾಡಿದರು. ಪ್ರತಿಜ್ಞಾವಿಧಿಯನ್ನು ಸಂಚಾರಿ ಠಾಣೆಯ ಇನ್ಸ್ಪೆಕ್ಟರ್ ಆದ ಅಲಿ ಷೇಕ್ ಅವರು ಬೋಧಿಸಿದರು.

ನಗರ ಉಪವಿಭಾಗ ಡಿಎಸ್ಪಿ ನಾಗರಾಜ್ ಜಿ, ವಿನೋದ್ ಮಣ್ಣೂರ, ವೀರೇಶ್ ಗೊಬ್ಬೂರ, ಸಂತೋಷ ಜಳಕಿ, ಗಣೇಶ್ ಕಾಸರ, ಇಮಾಮ ನದಾಫ್ ಇದ್ದರು.

ನಾಗೇಶ ಮುರುಡಿ ನಿರೂಪಿಸಿದರು. ಮಾಂತೇಶ ಮಲ್ಲೂರ ವಂದಿಸಿದರು

## ಸಂಘ-ಸಂಸ್ಥೆಗಳಿಂದ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ ಕಲಾಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸಂಘ–ಸಂಸ್ಥೆಗಳಿಗೆ ಧನಸಹಾಯಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ 2026–27ನೇ ಸಾಲಿನ ಸಾಮಾನ್ಯ–ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿ ಅರ್ಜಿ ಆಹ್ವಾನಿಸಿದೆ.

ಕಲಾವಿದರಿಗೆ ವಾದ್ಯ ಪರಿಕರ ಮತ್ತು ವೇಷಭೂಷಣಗಳ ಖರೀದಿಗೆ ಸಹಾಯಧನ ಹಾಗೂ ಚಿತ್ರಕಲೆ, ಶಿಲ್ಪ ಕಲಾಕೃತಿಗಳ ಪ್ರದರ್ಶನಕ್ಕೆ ಸಹಾಯಧನ ನೀಡಲಾಗುವುದು. ಅರ್ಹ ಅಭ್ಯರ್ಥಿಗಳು ಸೇವಾಸಿಂಧು Sevasindhu. Karnataka.gov.in ಮುಖಾಂತರ ಜು. 22 ರಿಂದ ಆ. 20 ರ ಸಂಜೆ 5.30 ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಸರ್ಕಾರದ ಮಾರ್ಗಸೂಚಿಯನ್ನು ಸೇವಾಸಿಂದು :www.Kannadasiri.Karnataka.gov.in ಪೋರ್ಟಲ್ ಅಳವಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080–24410574, 08022213530, 9986837037, 08022241325, ವಿಜಯಪುರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯ ದೂರವಾಣಿ ಸಂಖ್ಯೆ: 08352–251261 ಮತ್ತು ವಿಜಯಪುರ ಜಿಲ್ಲೆಯ ವ್ಯವಸ್ಥಾಪಕರು, ಸೇವಾಸಿಂಧು ಇವರನ್ನು ಸಂಪರ್ಕಿಸಬಹುದಾಗಿದೆ.

ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿಗಳನ್ನು ನೇರವಾಗಿ ಇಲಾಖೆಯಲ್ಲಿ ಸ್ವೀಕ–ರಿಸುವುದಿಲ್ಲ. ಸೇವಾ ಸಿಂಧುಪೋರ್ಟಲ್ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಪ್ರಕಟಣೆ ತಿಳಿಸಿದೆ.

## ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ವರ್ಕ್ಶಾಪ್ ಕ್ಯಾಲ್ಕುಲೇಷನ್ ಅಂಡ್ ಸೈನ್ಸ್ ಹಾಗೂ ಎಲೆಕ್ಟ್ರಿಷಿಯನ್ ವಿಷಯಗಳಲ್ಲಿ ಅತಿಥಿ ಉಪನ್ಯಾಸಕರಇಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಬಿ. ಇ ಅಥವಾ ಡಿಪ್ಲೊಮಾ ಎಲೆಕ್ಟ್ರಿಕಲ್,ಮೆಕ್ಯಾನಿಕಲ್ ವಿದ್ಯಾರ್ಹತೆ ಹಾಗೂ ಅನುಭವ ಹೊಂದಿರುವ ಆಸಕ್ತ ಅಭ್ಯರ್ಥಿಗಳು ಮೂಲ ದಾಖಲಾತಿಗಳೊಂದಿಗೆ ನಾಲತವಾಡದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗೆ ಖುದ್ದಾಗಿ ಭೇಟಿ ನೀಡಬಹುದಾಗಿದೆ ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮೋ 9986123893, 9008692270 ಹಾಗೂ 8050322980 ಮೂಲಕ ಸಂಪರ್ಕಿಸಬಹುದಾಗಿದೆ ಎಂದು ಸರ್ಕಾರಿ ಕೈಗಾ–ರಿಕಾ ತರಬೇತಿ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ರಾಷ್ಟ್ರೀಯ ಅತ್ಯುತ್ತಮ ಆಯುರ್ವೇದ ಕಾಲೇಜುಗಳಲ್ಲಿ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್. ಆಯುರ್ವೇದ ಕಾಲೇಜಿಗೆ 4ನೇ ರಾಝ್ಯಂಕ್

## ಎ.ವಿ.ಎಸ್. ಆಯುರ್ವೇದ ಕಾಲೇಜಿಗೆ ಸತತ 2ನೇ ಸಲ 4ನೇ ರಾಝ್ಯಂಕ್

ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಪ್ರತಿಷ್ಠಿತ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ. ಎಸ್. ಆಯುರ್ವೇದ ಕಾಲೇಜು ರಾಷ್ಟ್ರೀಯ ಅತ್ಯುತ್ತಮ ಆಯುರ್ವೇದ ಕಾಲೇಜುಗಳಲ್ಲಿ ಸತತ ಎರಡನೇ ಬಾರಿಗೆ 4ನೇರಾಝ್ಯಂಕ್ಪಡೆದಿದೆ.

ದೇಶದ ಹೆಸರಾಂತ ನಿಯತಕಾಲಿಕ ಔಟಲುಕ್ ಐಸಿಎಆರ್‌ಇ– 2026 ನಡೆಸಿದ ರಾಷ್ಟ್ರೀಯ ಸಮೀಕ್ಷೆಯಲ್ಲಿ ದೇಶದ ಪ್ರತಿಷ್ಠಿತ 20 ಆಯುರ್ವೇದ ಕಾಲೇಜುಗಳಲ್ಲಿ ಬಿ.ಎಲ್.ಡಿ.ಇ ಆಯುರ್ವೇದ ಕಾಲೇಜು 4ನೇ ರಾಝ್ಯಂಕ್ ಲಭಿಸಿದೆ.

ಕಾಲೇಜಿನಲ್ಲಿ ಬೋಧನೆ, ಕಲಿಕಾ ಪರಿಸರ, ವಿದ್ಯಾರ್ಥಿಗಳಿಗೆ ನೀಡಲಾಗಿರುವ ಸೌಲಭ್ಯಗಳು, ಆಸ್ಪತ್ರೆಯಲ್ಲಿರುವ ಕಲಿಕಾ ಸೌಲಭ್ಯಗಳು, ಮಂಡಿಸಲಾಗಿರುವ ಸಂಶೋಧನೆ ಪ್ರಬಂಧಗಳು ಸೇರಿದಂತೆ ಮಾನದಂಡಗಳನ್ನು ಪರಿಗಣಿಸಿ ಈ ರಾಝ್ಯಂಕ್ ನೀಡಲಾಗಿದೆ. ಪ್ರತಿ ವರ್ಷ ಕಾಲೇಜಿನಲ್ಲಿ 100 ವಿದ್ಯಾರ್ಥಿಗಳು ಬಿ. ಎ. ಎಂ. ಎಸ್ ಪದವೀಧರರಾಗಿ ಮತ್ತು 22 ವೈದ್ಯರುಗಳು ಎಂ. ಡಿ ಹಾಗೂ ಎಂ. ಎಸ್ ಸ್ನಾತಕಸ್ನಾತಕೋತ್ತರ ಪದವಿ ಪಡೆಯುತ್ತಿದ್ದಾರೆ.




ಕಾಲೇಜಿನ ಸಾಧನೆಗೆ ಬಿ. ಎಲ್. ಡಿ. ಇ ಸಂಸ್ಥೆಯ ಅಧ್ಯಕ್ಷ ಮತ್ತು ಸಚಿವ ಎಂ. ಬಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಮತ್ತು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ, ಸಂಸ್ಥೆಯ ಮುಖ್ಯ ಸಲಹೆಗಾರ ಡಾ. ಆರ್. ವಿ. ಕುಲಕರ್ಣಿ ಸಂತಸ ವ್ಯಕ್ತಪಡಿಸಿದ್ದು, ಕಾಲೇಜಿನ ಎಲ್ಲ ಬೋಧಕ ಮತ್ತು ಬೋಧಕರ ಹೊರತಾದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯ ಡಾ. ಅಶೋಕ ಪಾಟೀಲ ಮತ್ತು ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೂಕ ಜೀವಿಗೆ ಮಾನವೀಯ ವಿದಾಯ । ತದ್ದೇವಾಡಿಯಲ್ಲಿ ಮಂಗನಿಗೆ ಅದ್ಧೂರಿ ಅಂತಿಮ ಸಂಸ್ಕಾರ । ಗ್ರಾಮಸ್ಥರಿಂದ ವಿಶಿಷ್ಟ ಗೌರವ

■ ಉದಯರಶ್ಮಿ ದಿನಪತ್ರಿಕೆ

■ ವರದಿ: ರಾಜಶೇಖರ ಡೋಣಜಮಠ

ಚಡಚಣ: ಮೂಕ ಜೀವಿಗಳ ಮೇಲಿನ ಪ್ರೀತಿ, ಕರುಣೆ ಮತ್ತು ಮಾನವೀಯ ಮೌಲ್ಯಗಳನ್ನು ಸಾರುವ ಅಪರೂಪದ ಘಟನೆಯೊಂದು ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ತದ್ದೇವಾಡಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದಲ್ಲಿ ಮರಣ ಹೊಂದಿದ ಮಂಗನಿಗೆ (ವಾನರನಿಗೆ) ಗ್ರಾಮಸ್ಥರು ಮನುಷ್ಯರಿಗೆ ಸಲ್ಲಿಸುವ ರೀತಿಯಲ್ಲಿಯೇ ಗೌರವಪೂರ್ವಕವಾಗಿ ಪೂಜೆ ಸಲ್ಲಿಸಿ, ಮೆರವಣಿಗೆ ನಡೆಸಿ, ಸಂಪ್ರದಾಯಬದ್ಧವಾಗಿ ಅಂತಿಮ ಸಂಸ್ಕಾರ ನೆರವೇರಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ.

ಗ್ರಾಮದ ಸುತ್ತಮುತ್ತಲಿನ ಪ್ರದೇಶದಲ್ಲಿ ಹಲವು ವರ್ಷಗಳಿಂದ ಸಂಚರಿಸುತ್ತಿದ್ದ ಮಂಗವು ಗ್ರಾಮದ ಜನರೊಂದಿಗೆ ಬೆರೆತು ಬದುಕುತ್ತಿತ್ತು. ಗ್ರಾಮಸ್ಥರು ಅದನ್ನು ತಮ್ಮ ಕುಟುಂಬದ ಸದಸ್ಯನಂತೆಯೇ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಇತ್ತೀಚೆಗೆ ಮಂಗವು ಮೃತಪಟ್ಟ ಸುದ್ದಿ ತಿಳಿಯುತ್ತಿದ್ದಂತೆಯೇ ಗ್ರಾಮಸ್ಥರಲ್ಲಿ ದುಃಖದ ವಾತಾವರಣ ನಿರ್ಮಾಣವಾಯಿತು. ಬಳಿಕ ಗ್ರಾಮಸ್ಥರು ಸೇರಿ ಮಂಗನ ಪಾರ್ಥಿವ ಶರೀರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಹೂವಿನ ಹಾರಗಳಿಂದ ಹಾಗೂ ಹೊಸ ಬಟ್ಟೆಗಳಿಂದ ಅಲಂಕ–ರಿಸಿದರು. ನಂತರ ಗ್ರಾಮದ ಪ್ರಮುಖರು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ಮಂಗನ ಪಾರ್ಥಿವ ಶರೀರವನ್ನು ಶೃಂಗ–ರಿಸಿದ ವಾಹನದಲ್ಲಿ ಮೆರವಣಿಗೆಯ ಮೂಲಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಕೊಂಡೊಯ್ಯಲಾಯಿತು. ಮೆರವಣಿಗೆಯ ವೇಳೆ ಗ್ರಾಮಸ್ಥರು ಭಕ್ತಿಭಾವದಿಂದ ಅಂತಿಮ ನಮನ ಸಲ್ಲಿಸಿದರು. ಬಳಿಕ ಸಂಪ್ರದಾಯಬದ್ಧ ಧಾರ್ಮಿಕ ವಿಧಿವಿಧಾನಗಳೊಂದಿಗೆ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.

ಈ ಅಪರೂಪದ ಕಾರ್ಯವು ಗ್ರಾಮದಲ್ಲಿ ಮಾತ್ರವಲ್ಲದೆ ಸುತ್ತಮುತ್ತಲಿನ ಪ್ರದೇಶಗಳಲ್ಲಿಯೂ ಚರ್ಚೆಗೆ ಗ್ರಾಸವಾಗಿದ್ದು, ಜೀವ ಎಂದರೆ ಜೀವವೇ; ಅದು ಮನುಷ್ಯವಾಗಿರಲಿ ಅಥವಾ ಪ್ರಾಣಿಯಾಗಿರಲಿ, ಪ್ರತಿಯೊಂದು ಜೀವಿಗೂ ಗೌರವ ಸಲ್ಲಬೇಕು ಎಂಬ ಸಂದೇಶವನ್ನು ಗ್ರಾಮಸ್ಥರು ತಮ್ಮ ಕೃತಿಯ ಮೂಲಕ ಸಾರಿದ್ದಾರೆ. ಪರಿಸರ ಸಂರಕ್ಷಣೆ ಮತ್ತು ಪ್ರಾಣಿ–ಪಕ್ಷಿಗಳ ಮೇಲಿನ ಪ್ರೀತಿಯನ್ನು ಬೆಳೆಸುವಂತಹ ಈ ನಡೆಗೆ ಸಾರ್ವಜನಿಕ–ರಿಂದ ಮೆಚ್ಚುಗೆ ವ್ಯಕ್ತವಾಗಿದೆ.



ಅಂತಿಮ ಸಂಸ್ಕಾರ ಕಾರ್ಯಕ್ರಮದಲ್ಲಿ ಮಹಾಂತೇಶ ಸ್ವಾಮಿ ಹೀರೆಮಠ ಅವ–ರಿಂದ ಮಂತ್ರೋಪಚಾರಗಳೊಂದಿಗೆ ಪೂಜೆ ಹಾಗೂ ಅಂತಿಮ ಸಂಸ್ಕಾರ ಸಲ್ಲಿಸಲಾಯಿತು. ಗ್ರಾಮದ ಪ್ರಮುಖರಾದ ಸಾಹೇಬಗೌಡ ಬಿರಾದಾರ, ಅಣ್ಣುಗೌಡ ಬಿರಾದಾರ, ಶ್ರೀಪತಿ ವಡಗಾಂವ, ಗುರಣ್ಣಾ ಗಚ್ಚಿನಕಟ್ಟಿ, ರಾಜು ಪಾಟೀಲ, ಮುತ್ತಣ್ಣಗೌಡ ಪಾಟೀಲ, ಗುರುಬಾಳ ನಾವಿ, ಶಿವಾನಂದ ಬಂಡಿ, ಸಿದ್ದಲಿಂಗ ಹೀರೆಮಠ, ಪ್ರದೀಪ ವಡಗಾಂವ, ಅನೀಲ ಬಿರಾದಾರ, ಪ್ರಶಾಂತ ವಡಗಾಂವ ಸೇರಿದಂತೆ ಅನೇಕ ಗ್ರಾಮಸ್ಥರು ಭಾಗವಹಿಸಿ ಅಂತಿಮ ನಮನ ಸಲ್ಲಿಸಿದರು.

ತದ್ದೇವಾಡಿ ಗ್ರಾಮಸ್ಥರ ಈ ಮಾನವೀಯ ನಡೆ ಸಮಾಜಕ್ಕೆ ಮಾದ–ರಿಯಾಗಿದ್ದು, ಮೂಕ ಜೀವಿಗಳ ಮೇಲಿನ ಪ್ರೀತಿ ಮತ್ತು ಕಾಳಜಿಯನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕೆಂಬ ಸಂದೇಶವನ್ನು ಬಲವಾಗಿ ಸಾರಿದೆ.

### ಸಿದ್ಧಾಪುರ ಗ್ರಾಮದಲ್ಲಿ "ವಿಬಿ ಜಿ ರಾಮ ಜಿ" ಜನ ಜಾಗೃತಿ । ತಾಪಂ ಇಓ ಆನಂದಕುಮಾರ ಮ್ಯಾಗೇರಿ ಕರೆ

## "ವಿಬಿ ಜಿ ರಾಮ ಜಿ" ಕುರಿತು ಮನೆ ಮನೆಗೂ ಮಾಹಿತಿ ಒದಗಿಸಿ

■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ತಾಲೂಕಿನ ಸಿದ್ಧಾಪುರ ಕೆ ಗ್ರಾಮ ಪಂಚಾಯತಿಯಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮದಡಿ ಹಮ್ಮಿಕೊಂಡ "ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಆಜೀವಿಕಾ ಮಿಷನ್ ಗ್ರಾಮೀಣ – ವಿಬಿ ಜಿ ರಾಮ ಜಿ" ಯೋಜನೆಯ ಜನಜಾಗೃತಿ ಕಾರ್ಯಕ್ರಮಕ್ಕೆ ಕಾರ್ಯನಿರ್ವಾಹಕ ಅಧಿಕಾರಿ ಆನಂದಕುಮಾರ ಮ್ಯಾಗೇರಿ ಚಾಲನೆ ನೀಡಿ ಮಾತನಾಡಿದರು.

ಯೋಜನೆಯ ಕುರಿತು ಮಾತನಾಡಿದ ಅವರು, ಮನರೇಗಾ ಬದಲಾಗಿ ಈ ಯೋಜನೆಯು ಜುಲೈ 01 ರಿಂದ ಆರಂಭವಾಗಿದೆ. ಆದ್ದರಿಂದ ಈ ಯೋಜನೆಯ ಕುರಿತು ಮನೆ ಮನೆಗೂ ಮಾಹಿತಿಯನ್ನು ತಲುಪಿಸುವ ಕಾರ್ಯ ಕೈಗೊಳ್ಳಲಾಗಿದ್ದು, ಎಲ್ಲಾ ಅಧಿಕಾರಿಗಳು & ಸಿಬ್ಬಂದಿಗಳು ಕ್ರೀಯಾಶೀಲರಾಗಿ ಈ ಜನಜಾಗೃತಿ ಅಭಿಯಾನದಲ್ಲಿ ಭಾಗವಹಿಸಿ ಪ್ರತಿಯೊಬ್ಬರಿಗೂ ಮಾಹಿತಿ ತಲುಪುವಂತೆ ಮಾಡಬೇಕು ಎಂದರು.

ಈ ಹೊಸ ಯೋಜನೆಯಡಿ ಗ್ರಾಮೀಣ ಕೂಲಿಕಾರರಿಗೆ ಹಲವು ಸೌಲಭ್ಯಗಳನ್ನು ವಿಸ್ತರಿಸಲಾಗಿದೆ. ಮುಖ್ಯವಾಗಿ ಕೂಲಿ ಏರಿಕೆ, ಹಿಂದೆ ಇದ್ದ ರೂ 370 ದಿನಗೂಲಿಯನ್ನು ಈಗ ರೂ 382/– ಕ್ಕೆ ಏರಿಕೆ ಮಾಡಲಾಗಿದೆ. ಪುರುಷ ಮತ್ತು ಮಹಿಳೆಯರಿಗೆ ಸಮಾನ ಕೂಲಿ ನೀಡಲಾಗುತ್ತದೆ. ಕೆಲಸದ ದಿನಗಳು, ಮೊದಲು ಇದ್ದ 100 ದಿನಗಳ ಬದಲು ಈಗ 125 ಮಾನವ ದಿನಗಳ ಉದ್ಯೋಗ ಅವಕಾಶ ಕಲ್ಪಿಸಲಾಗಿದೆ. ತ್ವರಿತ ಪಾವತಿ, ಕೂಲಿ ಹಣವನ್ನು ಗರಿಷ್ಠ 15 ದಿನಗಳ ಒಳಗೆ ಕೂಲಿಕಾರರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು. ವಿಳಂಬವಾದರೆ ದಂಡದ ರೂಪದಲ್ಲಿ ಪರಿಹಾರ ನೀಡಲಾಗುತ್ತದೆ ಎಂದರು.

ನಮ್ಮ ತಾಲೂಕು ವ್ಯಾಪ್ತಿಯ ಯಾವೊಬ್ಬ ಕೂಲಿಕಾರರು ತಮ್ಮ ಊರಿನಲ್ಲಿಯೇ ವಿಬಿಜಿರಾಮಜಿ ಯೋಜನೆಯಡಿ ಕೂಲಿ ಕೆಲಸ ಮತ್ತು ಜೀವನೋಪಾಯ ಸೌಲಭ್ಯ ಪಡೆದುಕೊಳ್ಳಬೇಕು. ಎಲ್ಲಾ ನೋಂದಾಯಿತ ಕೂಲಿಕಾರರು ತಮ್ಮ ಇ–ಕೆವೈಸಿ ಪ್ರಕ್ರಿಯೆಯನ್ನು ಕಡ್ಡಾಯವಾಗಿ ಪೂರ್ಣಗೊಳಿಸಬೇಕು. ಹೊಸದಾಗಿ ಉದ್ಯೋಗ ಚೀಟಿ ಪಡೆಯಲು ಅರ್ಹ–ರಿರುವವರು ಗ್ರಾಮ ಪಂಚಾಯತಿಯನ್ನು ಸಂಪರ್ಕಿಸಬೇಕು" ಎಂದು ಅವರು ಕರೆ ನೀಡಿದರು.




ತಾಲೂಕು ಐಇಸಿ ಸಂಯೋಜಕರಾದ ಕಲ್ಲಪ್ಪ ನಂದರಗಿ ಮಾತನಾಡಿ, "ಜನರು ಈ ಯೋಜನೆಯಡಿ ಹೊಸದಾಗಿ ಜಾಬ್ ಕಾರ್ಡ್ಗಳಿಲ್ಲವೆಂದು ಭಯಪಟ್ಟುಕೊಳ್ಳುವ ಅಗತ್ಯವಿಲ್ಲ. ಹೊಸ ಕಾರ್ಡ್ಗಳು ಬರುವವರೆಗೆ ಈಗಾಗಲೇ ನರೇಗಾ ಯೋಜನೆಯಡಿ ವಿತರಿಸಿದ ಕಾರ್ಡ್ಗಳೇ ಅಲ್ಲಿಯವರೆಗೆ ಮಾನ್ಯವಾಗಿರುತ್ತವೆ. ಅವುಗಳನ್ನೇ ಬಳಸಿಕೊಂಡು ಜನರು ಕೆಲಸ ಪಡೆದುಕೊಳ್ಳಬಹುದು. ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ರೀಶೈಲ ಹಡಪದ, ತಾಲೂಕು ಐಇಸಿ ಸಂಯೋಜಕ ಕಲ್ಲಪ್ಪ ನಂದರಗಿ, ಲಿಡ್ ಬ್ಯಾಂಕಿನ ವಿರೇಶ ಡೆಂಗಿ, ಕಾರ್ಯದರ್ಶಿ ಎಸ್.ಎಮ್.ಕೋಳಿ, ಡಿಇಓ ರವಿ ಪವಾರ, ಎಂ.ಬಿ.ಕೆ ಶೈಲಾ ಪಂಚಾಳ, ಕಾಯಕ ಮಿತ್ರ ಸಂಗೀತಾ ಸಪ್ತಾಳಕರ ಸೇ–ರಿದಂತೆ ಗ್ರಾಮ ಪಂಚಾಯತಿ ಸದಸ್ಯರು, ಸ್ವಸಹಾಯ ಗುಂಪಿನ ಮಹಿಳೆಯರು ಮತ್ತು ನೂರಾರು ಕೂಲಿಕಾರರು ಉಪಸ್ಥಿತರಿದ್ದರು.

## ಅದಿವಾಸಿ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು :ಸಿ.ಎನ್.ರಾಜು

■ ಉದಯರಶ್ಮಿ ದಿನಪತ್ರಿಕೆ

ಎಚ್ ಡಿ ಕೋಟೆ: ಅದಿವಾಸಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರ ಸಕಲ ಸವಲತ್ತು ಕಲ್ಪಿಸಿಕೊಟ್ಟಿದೆ. ಈ ಬಾರಿಯ ಟಛಿ ಪರೀಕ್ಷೆಯಲ್ಲಿ ತಾಲೂಕಿನಲ್ಲಿ 68 ಹಾಡಿ ಮಕ್ಕಳು ತೇರ್ಗಡೆಯಾಗಿದ್ದಾರೆ. ಎಸ್ ಎಲ್ ಸಿ ಮುಗಿದ ಬಳಿಕ ಪಿಯುಸಿಗೆ ಮಕ್ಕಳನ್ನು ಪೋಷಕರು ಸೇ–ರಿಸುತ್ತಿಲ್ಲದಿರುವುದು ನನ್ನ ಗಮನಕ್ಕೆ ಬಂದಿದೆ. ಯಾವುದೇ ಕಾರಣಕ್ಕೂ ಮಕ್ಕಳನ್ನು ಶಿಕ್ಷಣದಿಂದ ವಂಚಿತರಾಗಿ ಮಾಡಬೇಡಿ. ಕನಿಷ್ಠ ಪಿಯುಸಿ ಓದಿಸಿದರೆ ಅವರು ಸಮಾಜದಲ್ಲಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುತ್ತಾರೆ ಎಂದು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಸಿ ಎನ್ ರಾಜು ಹೇಳಿದರು

ಪಟ್ಟಣದ ಡಾ ಬಿ ಆರ್ ಅಂಬೇಡ್ಕರ್ ಭವನದಲ್ಲಿ ನಡೆದ ಪೀಪಲ್ ಟ್ರೀ ಸಂಸ್ಥೆಯ ಚಿಲ್ಡನ್ಸ್ ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು. ತಾಲೋಕಿನಲ್ಲಿ ಆದಿವಾಸಿ ಮಕ್ಕಳ ಶಿಕ್ಷಣ, ಆರೋಗ್ಯ, ಆಹಾರದ ವಿಷಯಗಳಲ್ಲಿ ಪೀಪಲ್ ಟ್ರೀ ಸಂಸ್ಥೆ ಅತ್ಯಂತ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದ್ದು ಇದು ಶ್ಲಾಘನೀಯ ಕೆಲಸವಾಗಿದೆ. ಇಂತಹ ಉತ್ತಮ ಕೆಲಸ ಮಾಡುತ್ತಿರುವ ಈ ಸಂಸ್ಥೆಯಲ್ಲಿ ಓದುತ್ತಿರುವ ಮಕ್ಕಳಿಗೆ ನನ್ನ ಕೈಲಾದ ಸಹಾಯ ಮಾಡುತ್ತೇನೆ ಎಂದು ಸಿ. ಎನ್ ರಾಜು ಭರವಸೆ ನೀಡಿದರು.

ಸಂಸ್ಥೆಯ ಸಂಯೋಜಕಿ ಸುಮಿತ್ರ ಮಾತನಾಡಿ, ಪೀಪಲ್ ಟ್ರೀ ಸಂಸ್ಥೆಯೂ ತಾಲೂಕಿನಲ್ಲಿ ಸುಮಾರು 30 ಕ್ಕೂ ಹೆಚ್ಚು ಹಾಡಿಗಳಲ್ಲಿ ಆದಿವಾಸಿಗಳ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಂಘಟನೆ ವಿಷಯಗಳ ಜೊತೆಗೆ ಆದಿವಾಸಿಗಳ ಆರೋಗ್ಯ, ಆಹಾರ, ಕಲೆ, ಸಂಸ್ಕೃತಿ ಮತ್ತು ಹವಾಮಾನ ಸಂರಕ್ಷಣೆ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡುತ್ತಾ ಬರುತ್ತಿದೆ.ಶಿಕ್ಷಣ ವಂಚಿತ ಮಕ್ಕಳಿಗೆ ಗುಣಮಟ್ಟದ ಕಲಿಕೆ ನೀಡುವ ಉದ್ದೇಶದಿಂದ ಮಗ್ಗೆಯಲ್ಲಿ ಹೆಣ್ಣುಮಕ್ಕಳಿಗಾಗಿ ವಸತಿ ಶಾಲೆಯನ್ನು ತೆರೆದು ಸರ್ಕಾರಿ ಶಾಲೆಗೊಗುವ ಮಕ್ಕಳನ್ನ ಅಲ್ಲಿ ಉಳಿಸಿಕೊಂಡು ಸಂಜೆ ಮತ್ತು ಬೆಳ್ಳಗ್ಗೆ ಟ್ಯೂಷನ್, ಕೊಡುವ ಮೂಲಕ ಮಕ್ಕಳಿಗೆ ಬೇಕಾದ ಎಲ್ಲಾ ವಿಷಯಗಳನ್ನು ಕಲಿಸುವ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.




ಕಾರ್ಯಕ್ರಮದಲ್ಲಿ ಮಾದೇಶ್, ಸೋಮಣ್ಣ, ಮಹೇಂದ್ರ ಕುಮಾರ್, ಮಹೇಶ್, ವಿಜಯ್ ಕುಮಾರ್, ನಟರಾಜ್, ಜಿ ಸ್ವಾಮಿ, ಕೆಂಚಯ್ಯ, ಎಡತೊರೆ ಮಹೇಶ್, ಜವರೇಗೌಡ ಮಕ್ಕಳನ್ನು ಕುರಿತು ಮಾತನಾಡಿದರು.

ವೇದಿಕೆಯಲ್ಲಿ ಪೀಪಲ್ ಟ್ರೀ ಸಂಸ್ಥೆ ಸಂಸ್ಥಾಪಕ ಸಿದ್ಧಾರ್ಥ. ಗ್ರೇಡ್ 2 ತಹಶೀಲ್ದಾರ್ ಮಾದೇಶ್, ಬಿಇಓ ಸಿ ಎನ್ ರಾಜು, ಪ.ವರ್ಗ ಕಲ್ಯಾಣಾಧಿಕಾರಿ ಮಹೇಶ್, ಪದ್ಮಶ್ರೀ ಪುರಸ್ಕೃತ ಸೋಮಣ್ಣ, ಮಹೇಂದ್ರ ಕುಮಾರ್, ಸಂಪನ್ಮೂಲ ವ್ಯಕ್ತಿಗಳಾದ ಉಮೇಶ್. ಬಿ. ನೂರಲಕುಪ್ಪೆ, ಯು ಎಸ್ ಉನ್ಮೀಲ್, ರಾಜಾ ಹುಣಸೂರು, ಎಡತೊರೆ ಮಹೇಶ್, ರಮೇಶ್ ಕೋಟೆ, ಆದಿವಾಸಿ ಮುಖಂಡರಾದ ನಟರಾಜ್, ಜಿ ಸ್ವಾಮಿ, ಕೆಂಚಯ್ಯ, ವಿಜಯ್ ಕುಮಾರ್, ಸುರೇಶ್, ಚೆನ್ನಬಸಪ್ಪ, ಶಿವಮ್ಮ, ಪ್ರಸನ್ನ, ಆನಂದ, ಶಶಿಕಲಾ, ಸವಿತಾ, ಬಸವರಾಜ್, ಕುಮಾರಿ, ರತ್ನಮ್ಮ, ಪೀಪಲ್ ಟ್ರೀ ಸಂಸ್ಥೆಯ ಜವರೇಗೌಡ, ಸುಮಿತ್ರ, ಲತಾ, ಸಮುದಾಯ ನಾಯಕರಾದ ಮಂಜು, ಮರಿಲಿಂಗಯ್ಯ, ಸಣ್ಣಸ್ವಾಮಿನಾಯ್ಕ, ರೇಖಾ, ಮತ್ತಿತರರು ಹಾಜರಿದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR